ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೮, ಜನವರಿ ೨೦೧೫

ಇಂಗು, ಏನಿದರ ಕಂಪು! ಆರೋಗ್ಯ ಪುಟ - ೬	ಅಣಕು ರಾಮನಾಥ್ ಅನರ್ಥದ ಟೀಕಾಚಾರ್ಯರು ಹಾಸ್ಯ ಪುಟ - ೯
ನಾಗಶ್ಯಲ ಕುಮಾರ್ ಕರ್ನಾಟಕದ ರಾಜವಂಶಗಳು ಪುಟ -೧೫	ಬೇಲೂರು ರಾಮಮೂರ್ತಿ ಕವಿ ಮುದ್ದಣ - ಲೇಖನ ಪುಟ - ೪

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೩
ಕವಿ ಮುದ್ದಣ-ಲೇಖನ ... ಪು. ೪

ಚಿಲುಮೆಯ ಒಳಗೆ

ಆರೋಗ್ಯ ... ಪು. ೬
ವಿಚಾರ-ವಿಹಾರ ... ಪು. ೮
ರಾಂ ರಾಮ! ಹಾಸ್ಯ ... ಪು. ೯

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೨
ರೆಸಿಪಿ ಕೊಡ್ತೀರಾ! ... ಪು. ೧೨
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೪
ಕರ್ನಾಟಕ -ರಾಜವಂಶಗಳು ... ಪು. ೧೫

ಚಿಲುಮೆಯ ಒಳಗೆ

ವಿಜ್ಞಾನ ... ಪು. ೧೬
ಅಲ್ಲಲ್ಲಿ ಏನೇನು ... ಪು. ೧೬

ಓದುಗರಿಗೆ ಹೊಸವರ್ಷ ೨೦೧೫ ರ ಶುಭಾಶಯಗಳು

ಈಗಿನ ಸುದ್ದಿ

ಸಿಡ್ನಿ ಕನ್ನಡ ಶಾಲೆಯ ವಾರ್ಷಿಕೋತ್ಸವದ ವರದಿ

೨೦೧೪ ಸಿಡ್ನಿ ಕನ್ನಡ ಶಾಲೆ ವಾರ್ಷಿಕ ದಿನಾಚರಣೆಯ ಪ್ರಯುಕ್ತ ಡಿ ೧೪ ರಂದು Wattle Grove ಸಾರ್ವಜನಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಪೋಷಕರೂ, ಮಕ್ಕಳೂ ಅತಿಥಿಗಳು ಎಲ್ಲರೂ ನೆರೆದು ಮಧ್ಯಾಹ್ನ ಮೂರಕ್ಕೆ ಪುಟ್ಟ ಮಕ್ಕಳಿಂದ ಶಾಲೆಯ ಪ್ರಾರ್ಥನೆಯಿಂದ ಶುರುವಾಯಿತು. ಬಂದವರಿಗೆ ಸ್ವಾಗತ ಕೋರುವ ಮೂಲಕ ವೇದಿಕೆಗೆ ಅತಿಥಿಗಳು ಮತ್ತು ಶಾಲೆಯ ಮುಖ್ಯ ಶಿಕ್ಷಕರು ಎಲ್ಲರನ್ನೂ ಆಹ್ವಾನಿಸಲಾಯಿತು. ಮೊದಲಿಗೆ ಕನ್ನಡ ಕಲಿಯಲು ಪ್ರಸ್ತುತವಾಗಿ ಆಗುತ್ತಿರುವ ತೊಂದರೆ ತೊಡಕು ಮತ್ತು ಅದಕ್ಕೆ ತಕ್ಕ ಸುಲಭ ಉಪಾಯಗಳನ್ನು ಶ್ರೀಮತಿ ವೀಣಾ ತಮ್ಮ ಚಿಕ್ಕ ಭಾಷಣದಲ್ಲಿ ತಿಳಿಸಿಕೊಟ್ಟರು. ನಂತರ ಶಾಲೆಯ ವಾರ್ಷಿಕ ಆರ್ಥಿಕ ವರದಿಯನ್ನು ಶ್ರೀಮತಿ ಸ್ಮಿತಾ ಮೇಲ್ಕೋಟೆ ಒಪ್ಪಿಸಿದರು. ಸಿಡ್ನಿಯ ಹಿರಿಯ ಕನ್ನಡಿಗರಲ್ಲಿ ಒಬ್ಬರಾದ ಶ್ರೀಯುತ ಅಶೋಕ್ ಅವರು ಅಂದಿನ ಮುಖ್ಯ ಅತಿಥಿಗಳಾಗಿ ಜೊತೆಗೆ ಉಪಸ್ಥಿತರಿದ್ದರು. ದೂರದೂರಿನಲ್ಲಿ ಕನ್ನಡ ಕಲಿಯಲು ಬರುತ್ತಿರುವ ಮಕ್ಕಳ ಮತ್ತು ಅವರನ್ನು ಶಾಲೆಗೆ ಕರೆತರುವ ಪೋಷಕರನ್ನೂ ಪ್ರಶಂಸೆ ಮಾಡಿದ ಅವರು,ಧರ್ಮ ಮತ್ತು ಭಾಷೆಯ ಬಗ್ಗೆ ಎಲ್ಲರಲ್ಲೂ ಪ್ರೇಮ ಉಕ್ಕುವಂತೆ ಮಾತನಾಡಿದರು. ನಂತರ ಶ್ರೀ ನಾರಾಯಣ ಅವರು ವರ್ಷದ ಉತ್ತಮ ವಿಧ್ಯಾರ್ಥಿಗಳ ಹೆಸರು ಸೂಚಿಸಿ ಅವರಿಗೆ ಶ್ರೀ ಅಶೋಕ್ ಮತ್ತು ಶ್ರೀ ಶ್ರೀಧರ್ ಅವರಿಂದ ಉಡುಗೊರೆ, ಪ್ರಶಂಸಾ ಪತ್ರವನ್ನೂ ವಿತರಿಸಿದರು. ಈ ವರ್ಷ ಕುಮಾರಿ ಭಾರತಿ ಗೋಟ್ಯಾಳ್ ಎಲ್ಲಾ ಕ್ಷೇತ್ರದಲ್ಲು ಅತ್ಯುತ್ತಮ ಎನಿಸಿಕೊಂಡು ಪ್ರಶಸ್ತಿ ಪಡೆದಳು.

ಶಾಲೆಯ ನಿರಂತರ ಸೇವೆಗೆ ನಿಂತಿರುವ ಶಿಕ್ಷಕರಿಗೂ ಉಡುಗೊರೆಗಳನ್ನು ಕೃತಜ್ಞತಾ ಭಾವದಿಂದ ಕೊಡಲಾಯಿತು.

ಮುಂದೆ ಮಕ್ಕಳು ನಡೆಸಿಕೊಟ್ಟ ಚಿಕ್ಕ ಮನರಂಜನಾ ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂದಿತು. ಪುಟ್ಟ ಮಕ್ಕಳಿಂದ "ಒಂದು ಎರಡು ಬಾಳೆಲೆ ಹರಡು" ಮತ್ತು "ನದಿಯಲೊಂದು ಬಕ" ಈ ಎರಡು ಶಿಶುಗೀತೆ ಮುದ್ದಾಗಿ ಹಾಡಿದರು.ಅದಾದ ನಂತರ ಎಲ್ಲಾ ಶಾಲೆಯ ಮಕ್ಕಳು ಸೇರಿ ತಿಂಡಿ ಹಾಡನ್ನು ಚೆನ್ನಾಗಿ ಹಾಡಿ ಪ್ರೇಕ್ಷಕರಿಗೆ ಮುದನೀಡಿದರು.ಅಂತಿಮ ಪರೀಕ್ಷೆ ಉತ್ತೀರ್ಣರಾದ ಮಕ್ಕಳಿಂದ ಶಾಲೆಯ ಬಗ್ಗೆ ಮಾಡಿದ ಭಾಷಣದಲ್ಲಿ ಸೌಮ್ಯ ಸೊಗಸಾಗಿ ತಯಾರಿ ಮಾಡಿಕೊಂಡು ಅಷ್ಟೇ ಸ್ವಾರಸ್ಯವಾಗಿ ಮಾತನಾಡಿದಳು.ಅದಲ್ಲದೇ ಮಕ್ಕಳು ವಚನ, ಪದ್ಯ, ಒಗಟು ಇನ್ನೂ ಅನೇಕ ಕಾರ್ಯಕ್ರಮ ನಡೆಸಿಕೊಟ್ಟರು.ಪುಟ್ಟ ಬಾಲಕ ಸ್ಕಂದ ದೇಶ್ ಕುಲಕರ್ಣಿ ಸ್ವಲ್ಪವೂ ತಡವರಿಸದೆ ಸರಾಗವಾಗಿ ಹಾಡಿದ ಜಯ ಭಾರತ ಜನನಿಯ ತನುಜಾತೆ ಹಾಡಂತೂ ಎಲ್ಲರನ್ನೂ ಅಚ್ಚರಿಗೊಳಿಸಿತು.

ನಿರೀಕ್ಷ ಮತ್ತು ಸಿಂಧು ಇಬ್ಬರೂ ಕೂಡಿ ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು ಕ್ಯಾರೆಯೋಕೆ ಇಂಪಾಗಿ ಮೂಡಿ ಬಂದು ಮಕ್ಕಳೆಲ್ಲಾ ಚಪ್ಪಾಳೆಯೊಂದಿಗೆ ತಾಳ ಸೇರಿಸಿದರು.ಆಂಗ್ಲ ಮತ್ತು ಭಾರತ ಸಂಸ್ಕೃತಿಯ ನಡುವೆ ಬೆಳೆಯುತ್ತಿರುವ ಮಕ್ಕಳು ಎರಡೂ ರೀತಿಯನ್ನು ಎತ್ತಿ ಹಿಡಿಯುವ ರೀತಿ ಒಂದು ಸಿನಿಮಾ ಹಾಡಿಗೆ ನೃತ್ಯ ಮಾಡಿದ್ದು ಚೆನ್ನಾಗಿ ಮೂಡಿಬಂದಿತು. ಒಂದು ಕಡೆ ಭಾರತೀಯ ಶೈಲಿಯಾದರೆ ಮತ್ತೊಂದು ಕಡೆ ಪಾಶ್ಚಿಮಾತ್ಯ ಇವೆರೆಡರ ಮಿಶ್ರಿತ ಶೈಲಿ ವಿಭಿನ್ನವಾಗಿದ್ದರೂ ಮಕ್ಕಳ ಕುಣಿತ ನೋಡಲು ಚೆನ್ನಾಗಿತ್ತು. ಮಕ್ಕಳೆಲ್ಲಾ ಗುಪ್ತವಾಗಿ ಕೂಡಿ ಶ್ರೀ ನಾರಾಯಣ ಮತ್ತು ರಾಜಲಕ್ಷ್ಮಿ ಅವರಿಗೆ ಒಂದು ಉಡುಗೊರೆ ಕೊಟ್ಟಿದ್ದು ಸಭಿಕರೆಲ್ಲರಲ್ಲಿ ಖುಷಿಯಾದ ವಿಷಯವಾಗಿತ್ತು.ಕಡೆಯಲ್ಲಿ ಈ ವರೆಗೂ ಶಾಲೆಯಲ್ಲಿ ಆಗಿಂದಾಗೆ ತೆರೆದ ಭಾವಚಿತ್ರಗಳ ಪವರ್ ಪಾಯಿಂಟ್ ಪ್ರದರ್ಶನ ಎಲ್ಲರ ಮನಮುಟ್ಟುವಂತಿತ್ತು. ▪

(ಮತ್ತಷ್ಟು ಚಿತ್ರಗಳಿಗೆ ಮುಂದಿನ ಪುಟ ನೋಡಿ) ...

ಕೇಳೋಣ

ಹೊಸ ಮಾದರಿಯ ಒಗಟು ಪುಟ ೧೨



ನೋಡೋಣ

ಕನಕ ನಮನ - ಸಿಡ್ನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಗಾಯಕಿ ಶ್ರೀಮತಿ ಅಪರ್ಣ ನಾಗಶಯನ ಹಾಡಿರುವುದನ್ನು ವೀಕ್ಷಿಸಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ಕನಕ ನಮನ - ಸಿಡ್ನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಗಾಯಕಿ ಶ್ರೀಮತಿ ಸೌಮ್ಯ ರಾಜೀವ್ ಹಾಡಿರುವುದನ್ನು ವೀಕ್ಷಿಸಲು ಮೇಲಿನ ಚಿತ್ರ ಕ್ಲಿಕ್ ಮಾಡಿ (Click picture to view)

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಈಗಿನ ಸುದ್ದಿ

ಸಿಡ್ನಿ ಕನ್ನಡ ಶಾಲೆಯ ವಾರ್ಷಿಕೋತ್ಸವದ ಚಿತ್ರಗಳು

ಎರಡು ತಿಂಗಳ ಪ್ರಮುಖ ದಿನಗಳು

ಜನವರಿ ೨೦೧೫ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ/ಉತ್ತರಾಯಣ, ಹೇಮಂತ/ಶಿಶಿರ ಋತು, ಪುಷ್ಯ /ಮಾಘ ಮಾಸ

01 ಗು - ಆಂಗ್ಲ ಹೊಸವರ್ಷದ ಮೊದಲ ದಿನ
02 ಶ - ಮಿಲದ್ ಅನ್ ನಬಿ
05 ಸೋ- ಹುಣ್ಣಿಮೆ
17 ಶ - ಏಕಾದಶಿ
15 ಗು - ಮಕರ ಸಂಕ್ರಾಂತಿ
20 ಮಂ - ಅಮಾವಾಸ್ಯೆ
21 ಬು - ಮಾಘ ಮಾಸ/ ಶಿಶಿರ ಋತು ಆರಂಭ
24 ಶ - ವಸಂತ ಪಂಚಮಿ
26 ಸೋ - ಗಣ ರಾಜ್ಯೋತ್ಸವ, 30 ಶು - ಏಕಾದಶಿ

ಫೆಬ್ರವರಿ ಶ್ರೀ ಜಯ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ/ಫಾಲ್ಗುಣ ಮಾಸ

03 ಮಂ - ಭಾರತ/ವ್ಯಾಸ ಹುಣ್ಣಿಮೆ
07 ಶ - ಸಂಕಷ್ಟ ಚತುರ್ಥಿ
14 ಶ - ವ್ಯಾಲೆಂಟೈನ್ಸ್ ಡೇ
15 ಭಾ - ವಿಜಯಾ ಏಕಾದಶಿ
17 ಮಂ - ಮಹಾ ಶಿವರಾತ್ರಿ
18 ಬು - ಶಿವರಾತ್ರಿ ಅಮಾವಾಸ್ಯೆ, ಆಶ್ ವೆಡ್ನೆಸ್ ಡೇ
19 ಗು - ಫಾಲ್ಗುಣ ಮಾಸ ಆರಂಭ
20 ಶು - ಶ್ರೀ ರಾಮಕೃಷ್ಣ ಪರಮಹಂಸ ಜಯಂತಿ



"ಹೊಸತು, ಹೊಸತು, ಹೊಸತು. ಎಲ್ಲವೂ ಹೊಸತಾಗಿರಬೇಕು. ಹಳೆಯದು ಬೇಡವೇ ಬೇಡ. ನಮ್ಮ ಕಣ್ಣು ಮುಂದಿರುವುದು ಮಾತ್ರ ಸತ್ಯ ... ಇತ್ಯಾದಿ.". ಇಂತಹ ಮಾತುಗಳು ಹೆಚ್ಚು ಹೆಚ್ಚಾಗಿ ಕೇಳಿಬರುತ್ತಿದೆ ಎಂಬುದು ಕೇವಲ ಬಹುತೇಕ ಜನರ ಅನಿಸಿಕೆಯೋ ಅಥವಾ ವಾಸ್ತವಿಕತೆಯೋ ಎಂದು ಪ್ರಶ್ನಿಸಿಕೊಳ್ಳುವಂತಾಗಿದೆ.

ತಮ್ಮ ತಮ್ಮ ತತ್ವ ಸಮರ್ಥನೆಯಲ್ಲಿ ನಿರತರಾಗಿ ಅವರವರ ನಿಲುವೇ ಸರಿ ಎಂದು ಮನುಷ್ಯತ್ವಕ್ಕೆ ಬೆಲೆ ಕೊಡದೆ, ಸುಮ್ಮನೇ ಪ್ರತಿಪಾದನೆ ಮಾಡುವುದು ವಿಷಾದನೀಯ ಸಂಗತಿಯೇ ಸರಿ!

ಮೇಲಿನ ಎರಡು ವಿಷಯಗಳನ್ನು, ವರ್ಷದ ಮೊದಲಲ್ಲೇ ಮೆಲಕು ಹಾಕಿ ಒಂದಷ್ಟು ಆತ್ಮಾವಲೋಕನ ಮಾಡಿಕೊಳ್ಳುವುದರಿಂದ, ನಾವೇ ಬಾಳಿ ಬದುಕಬೇಕಾದ ಈ ಜಗದಲ್ಲಿ ಹಿತವಾದ ವಾತಾವರಣ ಸಾಧ್ಯವಾಗುತ್ತದೆಯಲ್ಲವೇ!

ಈ ನಿಟ್ಟಿನಲ್ಲಿ ಜ್ಞಾಪಕ ಬರುವ ಒಂದು ಉತ್ತಮ ಹೇಳಿಕೆ ಹೀಗಿದೆ. "ನಾನು ನೀನು ಹೇಳಿದ್ದನ್ನು ಅನುಮೋದಿಸದೆ ಇರಬಹುದು, ಆದರೆ ನನ್ನ ಉಸಿರಿರುವ ತನಕ ನಾನು ನಿನ್ನ ವಾದವನ್ನು ಮಂಡಿಸುವುದಕ್ಕೆ ಬೆಂಬಲ ಕೊಡುತ್ತೇನೆ" (I do not agree with what you have to say but i defend to death your right to say it). ಅಂತೆಯೇ, ನಮ್ಮ ನೆಲದ ಮಾತುಗಳೇ ಆದ ಬಸವಣ್ಣನ - "ಅರಿವಿಂಗೆ ಹಿರಿದು, ಕಿರಿದುಂಟೆ", ಗೀತೆಯ - "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ-ಪ್ರಶ್ನೆಗಳನ್ನು ಹಾಕಿ ಮನವರಿಕೆ ಮಾಡಿಕೊಳ್ಳಬೇಕು" ಎನ್ನುವುದನ್ನೂ ಕೇಳಿರುತ್ತೇವೆ. ಹಾಗಿದ್ದೂ ಕೂಡ, ನಮ್ಮ ಯೋಚನಾ ಲಹರಿಯನ್ನು ಪ್ರಶ್ನಿಸಲು ಬಂದವರನ್ನು ಏಕಾಏಕಿ ನೂಕಿ, ಮಟ್ಟ ಹಾಕಿ "ನಾನು ಗೆದ್ದೇ" ಎಂದರೆ, ಅದು ಸತ್ಯದ ಮಾತಾಗುವುದಿಲ್ಲ. ಅದು ತನ್ನಹಮಿಕೆಯ ದರ್ಪವಾಗುತ್ತದಷ್ಟೇ. ಅವಸಾನದ ದಾರಿಯಾಗುತ್ತದಷ್ಟೇ.

ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎನ್ನುವ ಉತ್ತಮ ಚಿಂತನೆಯನ್ನು ಬದಿಗಿಟ್ಟು, ಪುರಾತನವಾದ ಮಾಹಿತಿಯನ್ನು ಒರೆಗೆ ಹಚ್ಚದೇ ಸಾರಾಸಗಟಾಗಿ ತಿರಸ್ಕರಿಸಿ, ಇತ್ತೀಚಿನ ತಲೆಮಾರಿನ ಯೋಚನೆ ಮಾತ್ರ ಸರಿ ಎನ್ನುವುದರಿಂದ, ಹಳೆ ಬೇರಿನ ಗಟ್ಟಿತನವನ್ನು ಕಳೆದುಕೊಂಡು, ಜೀವನವೆಂಬ ಮರವನ್ನು ಅಸ್ಥಿರಗೊಳಿಸುತ್ತಿರುವುದು ನಾವೇ ಎನ್ನುವುದನ್ನು ಮರೆಯುತ್ತೇವೆ. ಹಾಗೆಯೇ, "ಎಷ್ಟು ಕಷ್ಟವೋ ಹೊಂದಿಕೆಯೆಂಬುದು ನಾಲ್ಕು ದಿನದ ಈ ಬದುಕಿನಲಿ ..." ಎಂಬ ಕವಿವಾಣಿಯಂತೂ ಅನೇಕರ ದಿನನಿತ್ಯದ ಜೀವನದಲ್ಲಿ ಬಹುತೇಕ ಬಾರಿ ಬಂದು ಬಂದು, ಜ್ಞಾಪಿಸುತ್ತಿರುತ್ತದೆ. ಒಣ ಪ್ರತಿಷ್ಠೆಯ ಕಡೆಗೇಕೆ ಸಾಗುತ್ತಿದೆ ಮನುಕುಲ ಎಂದು ಚಿಂತಿಸುವಂತಾಗುತ್ತಿದೆ.

ವರ್ಷದ ಮೊದಲಲ್ಲಿ ಇದೆಂತಹ ಒಣ ಮಾತುಗಳು ಎಂದೆನಿಸಬಹುದು. ಒಳ್ಳೆಯ ಆಶಾ ಭಾವನೆ ನಿಜಕ್ಕೂ ಮುಖ್ಯ. ಅದಕ್ಕಿಂತಲೂ ಹೆಚ್ಚು ಮುಖ್ಯ ನಾವು ಕಾರ್ಯರೂಪಕ್ಕೆ ತರುವ ಚಿಂತನೆಗಳು. ಈ ಹಿನ್ನಲೆಯಲ್ಲಿ, ಹೆಚ್ಚುಹೆಚ್ಚು ಸಮಾಜಮುಖಿಯಾದ ಭಾವನೆಗಳು ಎಲ್ಲರ ಮನಸಿನಲ್ಲಿಯೂ ನೆಲಸಿ, ಮಾಡುವ ಪ್ರತಿಯೊಂದು ಕಾಯಕವೂ ಎಲ್ಲರ ಹಿತವನ್ನು ಬಯಸಿ ಮಾಡುವಂತಾಗಲಿ ಎಂದು ಆಶಿಸುತ್ತೇವೆ.

೨೦೧೫ ರಲ್ಲಿ ಸರ್ವಹಿತ ಚಿಂತನೆಗಳು ನಮ್ಮೆಲ್ಲರಲ್ಲಿ ಚಿಲುಮೆಯಂತೆ ಚಿಮ್ಮಲಿ. ಈ ಭುವಿಯು ಸರಾಗವಾಗಿ ಉಸಿರಾಡುವಂತಾಗಲಿ. ಪ್ರತೀ ದಿನವೂ " ಸುಂದರ ದಿನ, ಸುಂದರ ಇನ, ಸುಂದರ ವನ ನೋಡು ಬಾ" ಎನ್ನುವಂತಾಗಲಿ. ▪

ಮಹಾ ಕವಿ ಮುದ್ದಣ - ಒಂದು ನೆನಪು – ಭಾಗ ೧

ಲೇಖಕರು: ಬೇಲೂರು ರಾಮಮೂರ್ತಿ

ಆರಂಕುಶಮಿಟ್ಟೊಡಂ ನೆನವುದೆನ್ನಮನಂ ಬನವಾಸಿ ದೇಶಮಂ ಅಂದೊಡನೆ ನಮಗೆ ನೆನಪಾಗುವುದು ಪಂಪ. ಹಾಗೇ ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು, ಕನ್ನಡಂ ಕತ್ತೂರಿಯಲ್ತೆ, ಪದ್ಯಂ ವದ್ಯಂ ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು, ಸಪ್ತಾಕ್ಷರೀ ಮಂತ್ರ, ಮುಂತಾದ ಮಾತುಗಳನ್ನು ಕೇಳಿದಾಗ ನಮಗೆ ನೆನಪಾಗುವುದು ಮುದ್ದಣ. ಕನ್ನಡ ಹೊಸ ಸಾಹಿತ್ಯದ ಮುಂಗೋಳಿ ಎಂದೇ ಹೆಸರಾಗಿದ್ದ ಮುದ್ದಣ ನಮ್ಮನ್ನ ಅಗಲಿ ಹೋಗಿ 107 ವರ್ಷಗಳು ಕಳೆದರೂ ಇಂದಿಗೂ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸ್ತುತನಾಗಿದ್ದಾನೆ ಅಂದರೆ ಹುಟ್ಟಿದರೇ ಕನ್ನಡ ನಾಡಿನಲ್ಲಿ ಹುಟ್ಟಬೇಕು ಅನ್ನೋ ಹಾಗೆ ಬದುಕಿದರೇ ಮುದ್ದಣನ ಹಾಗೆ ಬದುಕಬೇಕು ಅನಿಸುತ್ತದೆ. ಹೌದು ಅವನು ಬದುಕಿದ್ದು ಕೇವಲ 31 ವರ್ಷಗಳೇ ಆದರೂ ಮಾಡಿದ ಸಾಧನೆ ಮಾತ್ರ ಅಪಾರ.

ಇಂತಹ ಮಹಾನ್ ಕವಿ ನಂದಳಿಕೆ ಲಕ್ಷ್ಮೀನಾರಾಯಣ ಹುಟ್ಟಿದ್ದು 24.1.1870 ರಲ್ಲಿ ಉಡುಪಿಯ ಬಳಿಯ ನಂದಳಿಕೆ ಗ್ರಾಮದಲ್ಲಿ. ಕಾಲವಾಗಿದ್ದು ಉಡುಪಿಯಲ್ಲಿ. ಹುಟ್ಟಿದ್ದು 19ನೇ ಶತಮಾನದಲ್ಲಿಯಾದರೆ ಕಾಲವಾಗಿದ್ದು 20ನೇ ಶತಮಾನದ ಪ್ರಾರಂಭದಲ್ಲಿ ಅಂದರೆ 16.2.1901.

ಚಿತ್ರಕೃಪೆ: ವಿಕಿಪೀಡಿಯ

ಕವಿ ಮುದ್ದಣ

ಹುಟ್ಟೂ ನಮಗೆ ಗೊತ್ತಿರುವುದಿಲ್ಲ ನಾವು ಏನಾಗುತ್ತೀವಿ ಅನ್ನುವುದೂ ನಮಗೆ ಗೊತ್ತಿರುವುದಿಲ್ಲ. ಆದರೆ ಅದೆಲ್ಲೋ ಆಸೆಯ ಬೀಜವೊಂದು ಸೇರಿಕೊಂಡುಬಿಟ್ಟಿದ್ದರೆ ಅದು ಚಿಗುರೊಡೆಯುವುದನ್ನೇ ಕಾಯುತ್ತಿರುತ್ತದೆ. ಚಿಗುರೊಡೆದಾಗ ಅದು ಯಾವ ರೀತಿ ಬೆಳೆಯುತ್ತದೆ ಅನ್ನುವುದು ಸ್ವತಹ ಆ ಬೀಜಕ್ಕೇ ಗೊತ್ತಿರುವುದಿಲ್ಲ. ಹಾಗೇ ಆಗಿದ್ದು ಮುದ್ದಣನ ಬದುಕಿನ ಕಥೆಯೂ ಕೂಡ. ಹುಟ್ಟಿದ್ದು ಉಡುಪಿಯ ನಂದಳಿಕೆ ಅಂದ ಮೇಲೆ ಪ್ರಾಥಮಿಕ ವಿದ್ಯಾಭ್ಯಾಸವೂ ಅಲ್ಲಿಯೇ ನಡೆಯಿತು. ಮುದ್ದಣ ಹೆಸರಿಗೆ ತಕ್ಕ ಹಾಗೆ ಮುದ್ದು ಮುದ್ದಾಗಿದ್ದನಂತೆ. ಅವನಿಗೆ ಮುದ್ದಣ ಹೆಸರು ಬರಲು ಇದೇ ಕಾರಣ. ಲಕ್ಷ್ಮೀನಾರಾಯಣ ಮುದ್ದಣನಾಗಿ ರೂಪುಗೊಂಡಿದ್ದು ಹೀಗೆ. ಮನೆ ದೇವರು ನಂದಳಿಕೆಯ ಮಹಾಲಿಂಗೇಶ್ವರ ಸ್ವಾಮಿ. ತಂದೆ ತಮ್ಮಯ್ಯ ಮುದ್ದಣನಿಗೆ ಓದುವುದರ ಜೊತೆಗೆ ಚಿಕ್ಕಪುಟ್ಟ ಕೆಲಸ ಮಾಡಿಕೊಂಡು ತಂದೆಯ ಜೊತೆ ದಿನಾ ದೇವಾಲಯಕ್ಕೆ ಹೂವು ಕಟ್ಟಿಕೊಡುವ ಕೆಲಸ. ತಮ್ಮಯ್ಯನಿಗೆ ಇಬ್ಬರು ಗಂಡು ಮಕ್ಕಳು. ಮುದ್ದಣನೇ ಹಿರಿಯ. ಚಿಕ್ಕವನು ಶಿವರಾಮಯ್ಯ. ಅವನಿಗೆ ಏನೊಂದು ಆಸ್ತಿಯೂ ಇರಲಿಲ್ಲ. ದುಡಿಯಬೇಕು ಉಣ್ಣಬೇಕು ನಾಲ್ಕು ಹೊಟ್ಟೆ ತುಂಬಬೇಕು. ಹೀಗೆ ದಿನಾ ದೇವಾಲಯಕ್ಕೆ ಹೂವು ಕಟ್ಟಿಕೊಡುವ ಕಾಯಕದಲ್ಲಿ ಮುದ್ದಣನೂ ಭಾಗಿಯಾಗುತ್ತಿದ್ದ. ಜೊತೆಗೆ ಹಬ್ಬದ ಸಂದರ್ಭಗಳಲ್ಲಿ ಅಲ್ಲಿ ನಡೆಯುತ್ತಿದ್ದ ಯಕ್ಷಗಾನ ಪ್ರಸಂಗಗಳನ್ನು ಅವನು ಕುತೂಹಲದಿಂದ ಗಮನಿಸುತ್ತಿದ್ದ. ಇದು ಅವನ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿತ್ತು ಅಂದರೆ ಅವನು ಎಲ್ಲಿಯಾದರೂ ಏಕಾಂತದಲ್ಲಿ ನಿಂತು ತಾನು ಕಂಡು ಕೇಳಿದ ಯಕ್ಷಗಾನದ ಮಟ್ಟುಗಳನ್ನು ಅಭ್ಯಾಸ ಮಾಡುತ್ತಿದ್ದ ಓದಿನಲ್ಲಿಯೂ ಹಿಂದೆ ಬೀಳದ ಮುದ್ದಣನ ಈ ಆಸಕ್ತಿಯನ್ನು ಗಮನಿಸಿದ ಹಿರಿಯರೊಬ್ಬರು ತಮ್ಮಯ್ಯನಿಗೆ ನಿನ್ನ ಮಗನಿಗೆ ಯಕ್ಷಗಾನ ಕಲಿಸು ಎಂದು ಸಲಹೆ ಮಾಡಿದರು. ಆದರೆ ಸಂಸಾರದ ಹೊರೆ ಬಹಳ ಭಾರವಾಗಿದ್ದುದರಿಂದ ತಮ್ಮಯ್ಯ ಮುದ್ದಣನನ್ನು ನಾಲ್ಕನೇ ಕ್ಲಾಸು ಮುಗಿದೊಡನೆ ಒಬ್ಬರ ಮನೆಗೆ ಕೂಲಿಗೆ ಕಳಿಸಿಬಿಟ್ಟ. ಇದು ಮುದ್ದಣನ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಬೆಟ್ಟದಷ್ಟು ಆಸೆ ಹೊತ್ತು ನಾನು ಮುಂದೆ ಓದಬೇಕು ಅಂತ ಹಂಬಲಿಸುತ್ತಿದ್ದ ಮುದ್ದಣ ಪ್ರಪಾತಕ್ಕೆ ಬಿದ್ದ ಹಾಗೆ ಒದ್ದಾಡಿದ. ನಾನು ಉಡುಪಿಗೆ ಹೋಗಿ ಓದಿ ಮುಂದೆ ಬರ್ತೀನಿ ಅಂತ ಹೊರಟೇ ಬಿಟ್ಟ.

ರತ್ನಾವತಿ ಕಲ್ಯಾಣ ಮತ್ತು ಕುಮಾರ ವಿಜಯ - ಯಕ್ಷಗಾನ,
ಅದ್ಭುತ ರಾಮಾಯಣ, ಶ್ರೀ ರಾಮ ಪಟ್ಟಾಭಿಷೇಕ ಮತ್ತು ಶ್ರೀ ರಾಮಾಶ್ವಮೇಧ - ಕಾವ್ಯಗಳು
ಇವುಗಳ ಜೊತೆಗೆ ಮಕ್ಕಳಿಗಾಗಿ ರಚಿಸಿದ ಜೋ ಜೋ ಪದಗಳು,
ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಸುವಾಸಿನಿ ಪತ್ರಿಕೆಗೆ ಬರೆದ ಬಿಡಿ ಲೇಖನಗಳು

ಓದುವುದು ಸರ್ಕಾರೀ ಶಾಲೆಯಾದರೂ ಅವನ ನೆಲೆಗೆ, ವಾರಾನ್ನಕ್ಕೆ ವ್ಯವಸ್ಥೆ ಆಗಬೇಡವೇ. ಓದುವುದು ಅವನ ಹಣೆಯಲ್ಲಿ ಬರೆದಿತ್ತು ಅದಕ್ಕೇ ವಿಧಿ ಅವನನ್ನು ಉಡುಪಿಗೆ ಕರೆದುಕೊಂಡು ಬಿಟ್ಟಿತು. ವಾರಾನ್ನದ ಮನೆಯೊಂದನ್ನು ಗೊತ್ತುಮಾಡಿಕೊಂಡು ಮುದ್ದಣ ಉಡುಪಿಯ ಸರ್ಕಾರೀ ಶಾಲೆಯಲ್ಲಿ ಐದನೇ ಕ್ಲಾಸಿಗೆ ಸೇರಿಯೇ ಬಿಟ್ಟ. ಐದಾಯಿತು, ಆರಾಯಿತು. ಮತ್ತೆ ಮುಂದೆ ಓದು ಮುಂದುವರಿಸುವುದು ಸಾಧ್ಯವಿರಲಿಲ್ಲ. ಆಗ ಅಲ್ಲಿನ ಹೆಡ್ ಮಾಸ್ಟರ್ ಸಲಹೆಯಂತೆ ಕನ್ನಡ ತರಪೇತಿ ಶಾಲೆಯನ್ನು ಸೇರಿದ. ಅಲ್ಲಿ ಸ್ಕೈಫಂಡ್ ಸಿಗತ್ತಿದುದರಿಂದ ಅದು ಅವನ ಬದುಕಿಗೂ ಸಹಾಯಕವಾಯಿತು. ಆದರೆ ಎರಡು ವರ್ಷ ತರಪೇತಿ ಪಡೆದು ಬಂದರೂ ಅವನಿಗೆ ಕೆಲಸ ಸಿಗಲಿಲ್ಲ. ಆಗ ಮುದ್ದಣನ ಕಟ್ಟುಮಸ್ತಾದ ದೇಹವನ್ನು ಕಂಡು ನೀವು ಮದರಾಸಿಗೆ ಹೋಗಿ ದೈಹಿಕ ಶಿಕ್ಷಣ ತರಪೇತಿಯನ್ನೂ ಪಡೆದು ಬನ್ನಿ ಅಂದರು. ಮುದ್ದಣ ಮದರಾಸಿಗೆ ಹೋದ. ಅಲ್ಲಿ ದೈಹಿಕ ಶಿಕ್ಷಣದ ಜೊತೆಗೆ ಇನ್ನಿತರ ಓದನ್ನೂ ಮಾಡಿದ. ಆಮೇಲೆ ಉಡುಪಿಯ ಸರ್ಕಾರೀ ಶಾಲೆಯಲ್ಲಿ ಒಂದು ವ್ಯಾಯಾಮ ಶಿಕ್ಷಕನ ಹುದ್ದೆ ದೊರೆಯಿತು.

ಮುಂದಿನ ಪುಟ ನೋಡಿ ...

ಹೀಗೆ ಬದುಕಿಗೊಂದು ಆಸರೆಯಾದ ನಂತರ ಮುದ್ದಣ ತನ್ನ ಆಸಕ್ತ ವಿಷಯದತ್ತ ಗಮನ ಹರಿಸಿದ. ಶಾಲೆಯಲ್ಲಿದ್ದ ಪುಟ್ಟ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನು ಓದಲಾರಂಭಿಸಿದ. ಆಗ ಮಳಲಿ ಸುಬ್ಬರಾಯರು ಅಲ್ಲಿ ಕನ್ನಡ ಕಲಿಸುವ ಪಂಡಿತರಾಗಿದ್ದರು. ಅವರು ಮುದ್ದಣನ ಓದಿನ ಆಸಕ್ತಿಯನ್ನು ಗಮನಿಸಿ ಯಾವ ಯಾವ ಪುಸ್ತಕಗಳನ್ನು ಓದಬೇಕು ಅನ್ನುವ ಸಲಹೆ ಕೊಟ್ಟರು. ಅದಾಗಲೇ ಮುದ್ದಣ ಯಕ್ಷಗಾನದ ವಿಷಯಗಳನ್ನು ಚನ್ನಾಗಿ ಅರಿತುಕೊಂಡು ಓದುವುದರ ಜೊತೆಗೆ ಬರೆಯುವುದನ್ನೂ ಹವ್ಯಾಸ ಮಾಡಿಕೊಂಡು 1889-92ರ ಸುಮಾರಿನಲ್ಲಿ ರತ್ನಾವತಿ ಕಲ್ಯಾಣ, ಕಮಾರ ವಿಜಯ ಅನ್ನುವ ಎರಡು ಯಕ್ಷಗಾನ ಪ್ರಸಂಗಗಳನ್ನು ಬರೆದ. ಆದರೆ ಅವುಗಳನ್ನು ಪ್ರಕಟಣೆ ಮಾಡೋರು ಯಾರು. ಬರೆದದ್ದನ್ನು ಹಾಗೇ ಮನೆಯಲ್ಲಿ ಇಟ್ಟುಕೊಳ್ಳಲು ಅವನ ಮನಸ್ಸು ಒಪ್ಪಲಿಲ್ಲ. ಹೀಗಾಗೆ ಅವುಗಳನ್ನು ತಾನೇ ಮುದ್ರಣ, ಪ್ರಕಟಣಗೊಳಿಸಿದ. ಅದರಿಂದ ಸಾಕಷ್ಟು ಕೈ ಸುಟ್ಟುಕೊಂಡ ಅನ್ನುವುದು ಬೇರೆ ಮಾತು. ಅಲ್ಲಿಂದ ಮುಂದೆ ಅವನು ಯಾವ ಪುಸ್ತಕಗಳನ್ನೂ ಪ್ರಕಟಿಸುವ ಗೋಜಿಗೆ ಹೋಗಲಿಲ್ಲ.

ಮಳಲಿ ಸುಬ್ಬರಾಯರು ಓದುತ್ತಿದ್ದ ಗ್ರಂಥಗಳೆಲ್ಲವೂ ಮುದ್ದಣನ ಓದಿಗೂ ದೊರಕಿದವು. ಅ ಕಾಲದಲ್ಲಿ ಮುದ್ದಣನ ಸಮಕಾಲೀನರು ಎಂದರೆ ಹುರುಳಿ ಭೀಮರಾಯರು (ಇವರ ಮನೆಯ ಪಕ್ಕದಲ್ಲೇ ಮುದ್ದಣನ ವಾಸ. ಭೀಮರಾಯರ ಅಣ್ಣನ ಓರಗೆಯವನು ಮುದ್ದಣ.) ಅನೇಕ ದಿನ ಭೀಮರಾಯರ ಮನೆಯಲ್ಲೇ ಓದು, ಊಟ ಎಲ್ಲ ನಡೆಯುತ್ತಿತ್ತು), ಐರೋಡಿ ಶಿವರಾಮಯ್ಯನವರು, ವೆಂಕಟರಮಣ ಹೆಬ್ಬಾರರು, ಮಂಜೇಶ್ವರ ಗೋವಿಂದ ಪೈಗಳು ಮುಂತಾದವರಾರೂ ಮುದ್ದಣನ ಓದಿಗೆ, ಬರವಣಿಗೆಗೆ ಸ್ಫೂರ್ತಿ ಇತ್ತು ಆಸಕ್ತಿಯನ್ನು ಮೂಡಿಸಿದವರು ಮಳಲಿ ಸುಬ್ಬರಾಯರು. ಅವರ ಸಲಹೆಯಂತೆ ಮುದ್ದಣ ಹಳೆಗನ್ನಡವನ್ನೂ ಸಂಸ್ಕೃತವನ್ನೂ ಅಧ್ಯಯನ ಮಾಡಿದ. ಜೊತೆಗೆ ಕೇಶೀರಾಜನ ಶಬ್ದಮಣಿದರ್ಪಣ, ಕಿಟ್ಟಲ್ ಪದಕೋಶ ಅವನಿಗೆ ಸಹಾಯಕವಾದವು. ನಿತ್ಯವೂ ಮುದ್ದಣ ಮಳಲಿ ಸುಬ್ಬರಾಯರ ಬಳಿ ಕೂತು ಅವರ ಸಲಹೆಯಂತೆ ರಚಿಸಲು ತೊಡಗಿದ್ದ ಅದ್ಭುತ ರಾಮಾಯಣಕೃತಿಯ ಬಗೆಗೆ ಚರ್ಚೆ ನಡೆಸುತ್ತಿದ್ದ. ಇದು ಮುದ್ದಣನ ಬದುಕಿಗೊಂದು ತಿರುವಾಯಿತು. ಅಲ್ಲಿಂದ ಮುಂದೆ ಮಳಲಿ ಸುಬ್ಬರಾಯರಿಗೆ ಕುಂದಾಪುರದ ಶಾಲೆಗೆ ವರ್ಗವಾದಾಗ ಅವನಿಗೆ ಬಹಳ ಬೇಸರವಾಯಿತು. ಯಾಕೆಂದರೆ ಇದರಿಂದಾಗಿ ಮಳಲಿ ಸುಬ್ಬರಾಯರ ಸಂಪರ್ಕ ತಪ್ಪಿಹೋಗುತ್ತದೆ. ಅವರೊಡನೆ ಚರ್ಚೆ ತಪ್ಪಿಹೋಗುತ್ತದೆ ಅಂತ. ಆದರೆ ಅವರು ಕುಂದಾಪುರಕ್ಕೆ ಹೋಗೋದು ಅನಿವಾರ್ಯವಾಯಿತು. ಆದರೂ ಮುದ್ದಣ ಕುಂದಾಪುರಕ್ಕೆ ಹೋಗಿ ಬಂದು ಮಾಡುತ್ತಾ ಇದ್ದು ಕೃತಿ ರಚನೆಗೆ ಯಾವುದೇ ಭಂಗ ಬರದಂತೆ ನೋಡಿಕೊಂಡ. ಹೀಗೆ ತಯಾರಾದದ್ದೇ ಅದ್ಭುತ ರಾಮಾಯಣ. ಹಾಗೆ ನೋಡಿದರೆ ಯಕ್ಷಗಾನದ ಹೊರತಾಗಿ ಮುದ್ದಣ ಬರೆದು ಮೂರು ಗ್ರಂಥಗಳೂ ರಾಮಾಯಣ ಕುರಿತದ್ದೇ.

ಅದ್ಭುತ ರಾಮಾಯಣ ವಿಷಯದ ಆಯ್ಕೆ, ರಚನಾ ಕೌಶಲ ಮುಂತಾದುವುಗಳನ್ನು ಅವನು ಮಳಲಿ ಸುಬ್ಬರಾಯರ ಸಲಹೆಯಂತೆಯೇ ರಚಿಸಿದ. ಗ್ರಂಥ ಅಂತೂ ತಯಾರಾಯಿತು, ಮುಂದೆ ಏನು ಮಾಡುವುದು. ತಾನಂತೂ ಅದನ್ನು ಕೈಯಿಂದ ದುಡ್ಡು ಹಾಕಿ ಪ್ರಕಟಿಸುವುದಂತೂ ಆಗದ ಮಾತು. ಹಾಗಾದರೆ ಅದರ ಗತಿ. ಆಗ ಮಳಲಿ ಸುಬ್ಬರಾಯರು ಸಲಹೆ ಕೊಟ್ಟರು. ಆಗ ಮೈಸೂರಿನಿಂದ ಕಾವ್ಯಮಂಜರಿ ಅನ್ನುವ ಮಾಸಪತ್ರಿಕೆ ಬರುತ್ತಿತ್ತು.

ಸುಬ್ಬರಾಯರು ಅದಕ್ಕೆ ಚಂದಾದಾರರಾಗಿದ್ದರು. ಕಾವ್ಯಮಂಜರಿಯನ್ನು ಮುದ್ದಣನೂ ಓದಿದ್ದ. ಸುಬ್ಬರಾಯರು ನೀವು ನಿಮ್ಮ ಅದ್ಭುತ ರಾಮಾಯಣ ಕೃತಿಯನ್ನು ಕಾವ್ಯಮಂಜರಿಗೆ ಯಾಕೆ ಕಳಿಸಬಾರದು ಅನ್ನುವ ಸಲಹೆಯನ್ನು ಕೊಟ್ಟರು. ಮುದ್ದಣನಿಗೂ ಅದು ಸರಿ ಅನಿಸಿದರೂ ಯಾಕೋ ಅಳುಕು ಮನೆ ಮಾಡಿತು. ಹೇಳಿ ಕೇಳಿ ನಾನು ಕೇವಲ ಆರನೇ ಕ್ಲಾಸು ಪಾಸು ಮಾಡಿರುವವನು. ನನ್ನಂಥವನಿಂದ ಇಂಥಾ ಗ್ರಂಥ ರಚಿತವಾಗಿದೆ ಅಂದರೆ ಪ್ರಕಾಶಕರು ಅನುಮಾನ ಪಡೋದು ನಿಶ್ಚಯ, ಜೊತೆಗೆ ನಾನು ಯಾವುದೋ ಕೃತಿಚೌರ್ಯ ಮಾಡಿದೀನಿ ಅನ್ನುವ ಅನುಮಾನವನ್ನೂ ಪಡಬಹುದು ಅಂತ ಹಿಂದೇಟು ಹಾಕಿದ. ಆದರೆ ಮಳಲಿ ಸುಬ್ಬರಾಯರು ಧೈರ್ಯ ತುಂಬಿದರೂ ಅವನು ಕಾವ್ಯಮಂಜರಿಗೆ ಅದ್ಭುತ ರಾಮಾಯಣ ಕೃತಿ ಕಳಿಸುವಾಗ ಇದು ನನಗೆ ಸಿಕ್ಕಿದ ಹಸ್ತಪ್ರತಿ. ಇದರ ಲೇಖಕರು ಯಾರೋ ಗೊತ್ತಿಲ್ಲ ಇದು ಸೂಕ್ತ ಅನಿಸಿದರೆ ಪ್ರಕಟಿಸಿ ಅಂತ ಬರೆದು ಕಳಿಸಿದ. ಕೆಲವೇ ದಿನಗಳಲ್ಲಿ ಕಾವ್ಯಮಂಜರಿಯಿಂದ ಶ್ರೀ ರಾಮಾನುಜೈಯಂಗಾರರು ಪತ್ರ ಬರೆದು ಕೃತಿ ಅದ್ಭುತವಾಗಿದೆ ಇದನ್ನು ನಾವು ಕೂಡಲೇ ಪ್ರಕಟಣೆಗೆ ತೆಗೆದುಕೊಳ್ಳತ್ತೇವೆ. ಇದರ ಕರ್ತೃ ಯಾರೆಂದು ತಿಳಿಸಿ ಅಂತ ಬರೆದರು. ಆಗ ಸುಬ್ಬರಾಯರು ಈಗಲಾದರೂ ನಿಜ ಹೇಳಿ ಅಂದರೆ. ಮುದ್ದಣ ಆಗಲೂ ಹಿಂದೇಟು ಹೊಡೆದ. ಒಂದು ಸಾರಿ ಅದು ನನ್ನದಲ್ಲ ಅಂತ ಅವರಿಗೆ ಹೇಳಿರುವಾಗ ಈಗ ಅದು ಚನ್ನಾಗಿದೆ ಅಂದಾಗ ಅದು ನನ್ನದು ಅಂತ ಹೇಳೋದು ಹೇಗೆ ಅಂತ ಇದರ ಕರ್ತೃ ಯಾರೋ ನನಗೂ ಗೊತ್ತಿಲ್ಲ ಅದನ್ನು ಯಥಾವತ್ತಾಗಿ ಪ್ರಕಟಿಸಿ ಅಂತ ಬರೆದುಬಿಟ್ಟ. ಹೀಗೆ ಕಾವ್ಯಮಂಜರಿಯಿಂದ ಅದ್ಭುತ ರಾಮಾಯಣ ಲೇಖಕರ ಹೆಸರಿಲ್ಲದೇ ಅಚ್ಚಾಯಿತು. ಮುಂದೆ ಅವನು ರಚಿಸಿದ ಶ್ರೀ ರಾಮ ಪಟ್ಟಾಭಿಷೇಕ ಕೃತಿಗೆ ಮಹಾಲಕ್ಷ್ಮೀ ವಿರಚಿತ ಅಂತ ತನ್ನ ತಾಯಿಯ ಹೆಸರಿಟ್ಟ. ಈ ಮಹಾಲಕ್ಷ್ಮಿ ಯಾರು ಎಲ್ಲಿದ್ದಾರೆ ಅಂತ ಕೇಳಿದಾಗ ಕೂಡಾ ಯಾರೋ ನನಗೆ ತಿಳಿಯದು. ನನಗೆ ಸಿಕ್ಕಿದ ಹಸ್ತಪ್ರತಿ ನಿಮಗೆ ಕಳಿಸಿದ್ದೇನೆ ಅಂತ ಬರೆದುಬಿಟ್ಟ. ಅವನಿಗೆ ಯಾಕಂಥಾ ಕೀಳರಿಮೆ ಬಂದಿತ್ತು ಅನ್ನೋದು ಯಾರಿಗೂ ಅರ್ಥವಾಗದ ವಿಷಯವಾಗಿಯೇ ಉಳಿಯಿತು...

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು

ಇಂಗು, ಏನಿದರ ಕಂಪು

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಇಂಗು ಎಂಬ ಹೆಸರು ಕೇಳಿದೊಡನೆ ನೆನಪಿಗೆ ಬರುವುದು ಅದರ ತೀಕ್ಷ್ಣ ಕಟು ವಾಸನೆ. ಕಹಿಯಾಗಿದ್ದರೂ ಒಗ್ಗರಣೆಗೆ ಹಾಕಿದೊಡನೆ ಸ್ವಾದಯುಕ್ತ ರುಚಿ ಕೊಡುತ್ತದೆ. ಇಂಗಿನ ಒಗ್ಗರಣೆ ಹಾಕಿದ ತಿಳಿಸಾರಿನ ಕಂಪು ಮನೆಯಲ್ಲೆಲ್ಲಾ ಹರಡಿ ಬಾಯಲ್ಲಿ ನೀರೂರಿಸುತ್ತದೆ. ಇದರ ತವರು ಪೂರ್ವ ಇರಾನ್ ಮತ್ತು ಪಶ್ಚಿಮ ಅಫ್ಘಾನಿಸ್ತಾನ. ಪಾಕಿಸ್ತಾನ ಮತ್ತು ಭಾರತದ ಎತ್ತರ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರೀಯ ಹೆಸರು ಫೆರುಲ ಅಸಫೀಟಿಡ (Ferula assa-foetida). ಅಸ ಎಂದರೆ ಗಿಡಮರಗಳ ಅಂಟು, ಫೀಟಿಡ ಎಂದರೆ ದುರ್ಗಂಧ. ಏಪಿಯೇಸಿ (Apiaceae) ಕುಟುಂಬಕ್ಕೆ ಸೇರಿದ್ದು. ಇಂಗ್ಲೀಷಿನಲ್ಲಿ ಅಸಫೀಟಿಡ ಎಂದೂ, ಹಿಂದಿಯಲ್ಲಿ ಹಿಂಗ್ ಎಂದೂ ಕರೆಯುತ್ತಾರೆ. ಇತರ ಹೆಸರುಗಳು – ಅಸಾಂಟ್, ಫುಡ್ ಆಫ್ ದ ಗಾಡ್ಸ್, ಸ್ಟಿಂಕಿಂಗ್ ಗಮ್, ಡೆವಿಲ್ಸ್ ಡಂಗ್.

ಇಂಗು, ಬೇರಿನಿಂದ ಮತ್ತು ಕಾಂಡದಿಂದ ಒಸರುವ ಅಂಟು. ಎಳೆಯ ಕಾಂಡ ಮತ್ತು ಎಲೆಗಳನ್ನು ತರಕಾರಿಯಂತೆ ಉಪಯೋಗಿಸಬಹುದು. ಮಾರುಕಟ್ಟೆಯಲ್ಲಿ ದೊರಕುವ ಇಂಗಿನ ಉತ್ಪನ್ನಗಳು: ಇಂಗಿನ ಪುಡಿ, ಹರಳು, ಇಂಗಿನ ಎಣ್ಣೆ ಮತ್ತು ಇಂಗಿನ ನೀರು (asafoetida tincture). ಇಂಗಿನ ಹರಳು ಮತ್ತು ಪುಡಿಯಲ್ಲಿ ಶೇಕಡಾ 30ರಷ್ಟು ಇಂಗಿನ ಅಂಟು, 70ರಷ್ಟು ಅಕ್ಕಿ ಅಥವಾ ಗೋಧಿ ಹಿಟ್ಟು ಮತ್ತು ಅರೇಬಿಕಾ ಅಂಟು, ಎಣ್ಣೆಯಲ್ಲಿ ಅಸಫೀಟಿಡ ಡೈಸಲ್ಫೈ ಡ್ (asafoetida disulfide) ಮತ್ತು ಇತರ ರಾಸಾಯನಿಕಗಳು ಇರುತ್ತವೆ.

ಕ್ರಿಸ್ತಪೂರ್ವ ನಾಲ್ಕುನೂರರಲ್ಲಿ ಅಲೆಗ್ಝಾಂಡರ್ ದ ಗ್ರೇಟ್, ಇತರ ಸಾಂಬಾರ ಪದಾರ್ಥಗಳೊಂದಿಗೆ ಇಂಗನ್ನು ಕೂಡ ಪರ್ಷಿಯಾದಿಂದ ಪಾಶ್ಚಿಮಾತ್ಯ ದೇಶಗಳಿಗೆ ಕೊಂಡೊಯ್ದನೆಂಬ ಉಲ್ಲೇಖ ಪುರಾತನ ದಾಖಲೆಗಳಲ್ಲಿದೆ. ಪುರಾತನ ರೋಮಿನಲ್ಲಿ ಇಂಗನ್ನು ಅಡಿಗೆಗೆ ಉಪಯೋಗಿಸುತ್ತಿದ್ದರಂತೆ. ಪ್ರಾಚೀನ ಗ್ರೀಸ್ ದೇಶದ ವಿಜ್ಞಾನಿ ಡಿಯೋಸ್ಕೊರಿಡೆಸ್ (Dioscorides), ಇಂಗನ್ನು ಅಡಿಗೆಗೆ ಮತ್ತು ಔಷಧಿಯಾಗಿ ಉಪಯೋಗಿಸುವ ಬಗ್ಗೆ ಒಂದನೇ ಶತಮಾನದಲ್ಲೇ ಬರೆದಿದ್ದಾನೆ.

ಉಪಯೋಗಗಳು

ಕೇವಲ ಬೆರಳೆಣಿಕೆಯಷ್ಟು ದೇಶಗಳಲ್ಲಿ ಮಾತ್ರ ಇಂಗನ್ನು ಅಡಿಗೆಗೆ ಬಳಸುತ್ತಾರೆ. ಇಂಗಿನ ಬಳಕೆ ಹೆಚ್ಚಾಗಿರುವುದು ಭಾರತದಲ್ಲಿ ಮತ್ತು ಸಸ್ಯಾಹಾರಿಗಳಲ್ಲಿ. ಕಟು ವಾಸನೆ ಇದ್ದರೂ ಬಿಸಿ ಎಣ್ಣೆ ಅಥವಾ ತುಪ್ಪಕ್ಕೆ ಹಾಕಿದೊಡನೆ ಕಟುತ್ವ ಕಳೆದುಕೊಳ್ಳುತ್ತದೆ, ರುಚಿ ಹುರಿದ ನೀರುಳ್ಳಿ ಮತ್ತು ಬೆಳ್ಳುಳ್ಳಿಯಂತಾಗುತ್ತದೆ. ಜೈನರಿಗೆ, ವೈಷ್ಣವರಿಗೆ ಮತ್ತು ಧಾರ್ಮಿಕ ಹಿಂದುಗಳಿಗೆ ನೀರುಳ್ಳಿ ಮತ್ತು ಬೆಳ್ಳುಳ್ಳಿ ನಿಷಿದ್ಧ; ಬದಲು ಇಂಗನ್ನು ಉಪಯೋಗಿಸುತ್ತಾರೆ. ಬೌದ್ಧರು ಇಂಗನ್ನು ಉಪಯೋಗಿಸುವುದಿಲ್ಲ. (ಮುಂದಿನ ಪುಟ ನೋಡಿ) ...

ಮಸಾಲೆ ಪುಡಿ, ಹಪ್ಪಳ ಮತ್ತು ಉಪ್ಪಿನಕಾಯಿ ತಯಾರಿಕೆಗೆ, ಬಗೆಬಗೆಯ ಅಡಿಗೆಗೆ ಇಂಗನ್ನು ಬಳಸುವುದು ನಿಮಗೆ ಗೊತ್ತೆ ಇದೆ. ಆದರೆ ವೋಸ್ಟರ್ಶೈರ್ ಸಾಸ್ ನ (Worcestershire sauce) ತಯಾರಿಕೆಗೆ ಇಂಗು ಬಹು ಮುಖ್ಯವೆಂದು ನಿಮಗೆ ತಿಳಿದಿದೆಯೇ? ವಿಚಿತ್ರವೆಂದರೆ, ಇಂಗನ್ನು ಸುವಾಸನೆಗಾಗಿ ಸೌಂದರ್ಯವರ್ಧಕಗಳ ತಯಾರಿಕೆಗೂ, ದುರ್ವಾಸನೆಗಾಗಿ ಕ್ರಿಮಿಕೀಟಗಳನ್ನು, ನಾಯಿ, ಬೆಕ್ಕು ಇತರ ಕಾಡುಪ್ರಾಣಿಗಳನ್ನು ಹಿಮ್ಮೆಟ್ಟಿಸುವ ಉತ್ಪನ್ನಗಳ ತಯಾರಿಕೆಗೂ ಉಪಯೋಗಿಸುತ್ತಾರೆ!

ವೈದ್ಯಕೀಯ ಉಪಯೋಗಗಳು

ಪರ್ಯಾಯ ವೈದ್ಯಕೀಯ ಚಿಕಿತ್ಸೆಯಲ್ಲಿ ಅಜೀರ್ಣ, ಹೊಟ್ಟೆ ನೋವು, ಮಲಬದ್ಧತೆ, ವಾತ, ಅಸ್ತಮಾ, ಉಸಿರಾಟದ ತೊಂದರೆಗಳು ಮುಂತಾದುವುಗಳ ನಿವಾರಣೆಗೆ ಇಂಗನ್ನು ಉಪಯೋಗಿಸುತ್ತಾರೆ. ಮೂರ್ಛೆರೋಗ ತಡೆಹಿಡಿಯಲು, ಅಪೀಮು ಸೇವನೆಗೆ ಪ್ರತ್ಯೌಷಧಿಯಾಗಿಯೂ ಉಪಯೋಗಿಸುತ್ತಾರೆ. ಇವುಗಳಿಗೆ ವೈಜ್ಞಾನಿಕ ಪುರಾವೆ ಒದಗಿಸಲು ಸಂಶೋಧನೆಗಳು, ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ.

ಇಂಗು, ರಕ್ತದಲ್ಲಿನ ಕೊಲೆಸ್ಟಿರಾಲ್ ಮತ್ತು ಟ್ರೈಗ್ಲಿಸರೈಡ್ಸ್ (ಒಂದು ಬಗೆಯ ಕೊಬ್ಬು) ಪ್ರಮಾಣವನ್ನು ಕಡಿಮೆಗೊಳಿಸುತ್ತದೆ, ರಕ್ತದೊತ್ತಡವನ್ನು ತಗ್ಗಿಸುತ್ತದೆ, ರಕ್ತ ಹೆಪ್ಪುಗಟ್ಟುವುದನ್ನು ತಡೆಯುತ್ತದೆ, ರಕ್ತವನ್ನು ತೆಳುವಾಗಿಸಿ ರಕ್ತ ಪರಿಚಲನೆ ಸರಾಗವಾಗುವಂತೆ ಮಾಡುತ್ತದೆ ಎಂದು ಕೆಲ ವೈಜ್ಞಾನಿಕ ಸಂಶೋಧನೆ ಮತ್ತು ಅಧ್ಯಯನಗಳಿಂದ ತಿಳಿದುಬಂದಿದೆ. ಆದರೆ ಯಾರು, ಯಾವಾಗ, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಎಂದು ತಿಳಿದಿಲ್ಲ.

ಇರಿಟಬಲ್ ಬವೆಲ್ ಸಿಂಡ್ರೋಮ್ (Irritable Bowel Syndrome) ಖಾಯಿಲೆ ಇರುವವರು ನೀರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ತಿನ್ನಬಾರದು. ಇಂಗಿನಲ್ಲಿರುವ ರಾಸಾಯನಿಕಗಳು ಈ ಖಾಯಿಲೆಯ ಚಿಕಿತ್ಸೆಗೆ ಸಹಕಾರಿಯೆಂದು ಕೆಲ ವೈಜ್ಞಾನಿಕ ಅಧ್ಯಯನಗಳಿಂದ ತಿಳಿದುಬಂದಿದೆ.

ಅಪಾಯ ಮತ್ತು ಮುನ್ನೆಚ್ಚರಿಕೆ

ಇಂಗನ್ನು ಅಡಿಗೆಗೆ ಉಪಯೋಗಿಸುವುದರಿಂದ ಏನೂ ತೊಂದರೆ ಇಲ್ಲ, ಆರೋಗ್ಯಕ್ಕೂ ಒಳ್ಳೆಯದು. ಚಿಟಿಕೆ ಇಂಗನ್ನು ಒಂದು ಲೋಟ ಮಜ್ಜಿಗೆಗೆ ಹಾಕಿ ಕುಡಿದಲ್ಲಿ ವಾಯು ಮತ್ತು ಹೊಟ್ಟೆಯುಬ್ಬರ ನಿವಾರಣೆಯಾಗುತ್ತದೆ. ಆದರೆ ಇದರ ಸೇವನೆ ಮಿತಿಮೀರಿದಲ್ಲಿ ಅಪಾಯವಿದೆ. ಗರ್ಭಿಣಿಯರು, ಎದೆಹಾಲೂಡಿಸುವವರು, aspirin, heparin ಮತ್ತು warfarin ಮಾತ್ರೆ ಸೇವಿಸುವವರು, ಅಧಿಕ ರಕ್ತದೊತ್ತಡಕ್ಕೆ ಮಾತ್ರೆ ತೆಗೆದುಕೊಳ್ಳುವವರು, ಹೊಟ್ಟೆಹುಣ್ಣು (ulcers) ಮತ್ತು ಮೂರ್ಛೆರೋಗದಿಂದ ಬಳಲುತ್ತಿರುವವರು, ಇಂಗನ್ನು ಹಸಿಯಾಗಿ ಬಹುದಿನಗಳ ಕಾಲ ಸೇವಿಸುವುದು ಅಪಾಯಕಾರಿ. ಅತಿ ಹೆಚ್ಚು ಸೇವನೆಯಿಂದ ರಕ್ತಸ್ರಾವವಾಗಬಹುದು, ರಕ್ತದೊತ್ತಡ ಅಪಾಯಕಾರಿ ಮಟ್ಟಕ್ಕಿಳಿಯಬಹುದು, ವಾಂತಿ, ಬೇಧಿಯುಂಟಾಗಬಹುದು.

ನೆನಪಿಡಿ: ಪ್ರಕೃತಿ ಸಹಜ ಉತ್ಪನ್ನಗಳಿಂದ (natural products) ಅಪಾಯವಿಲ್ಲ ಎನ್ನುವುದು ಸತ್ಯವಲ್ಲ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಚಾರ ವಿಹಾರ

ಮಾಲು, ಅಡಿಲೈಡ್

ದಾನವೆಂಬ ಧರ್ಮ ನಾವು ತಿಳಿದುಕೊಂಡಿರುವಷ್ಟು ಸುಲಭವಲ್ಲ ಮತ್ತು ಸರಳವಲ್ಲ. ಅದು ಹರಿತವಾದ ಖಡ್ಗ ಧಾರೆಯಂತೆ; ಪವಿತ್ರವಾದ ದರ್ಭೆಯ ಅಲಗಿನಂತೆ; ಹೆಡೆ ಬಿಚ್ಚಿದ ವಿಷೋಗರನಂತೆ. ವಿವೇಕವಿಲ್ಲದ ದಾನ ಹಾನಿಕಾರಕ. ವಿವೇಕದಿಂದ ಮಾಡಿದ ದಾನ ಉದ್ಧಾರಕ. ಧರ್ಮದ ಮರಕ್ಕೆ ದಯೆ ಮೂಲವಾದರೆ, ದಾನ ಅದರ ದಿಂಡು.

ಈ ಮೇಲಿನ ಅರ್ಥಪೂರ್ಣ ಸಾಲುಗಳನ್ನು ತಮ್ಮ ವಿಚಾರ ತರಂಗದಲ್ಲಿ ಹೇಳಿದವರು ಶ್ರೀಯುತ ಜಿ.ಪೀ.ರಾಜರತ್ನಂ ರವರು

ದಾನ

ಮಹಾ ದಾನಿ ಎಂದು ಹೆಸರುವಾಸಿಯಾಗಿದ್ದ ಒಬ್ಬ ರಾಜನಿದ್ದನಂತೆ. ಒಮ್ಮೆ ಯಾವನೋ ಬಡವ ಆ ಧರ್ಮ ರಾಜನ ಬಳಿಗೆ ಬಂದು ಏನೋ ಯಾಚಿಸಿದ. ಆ ಧರ್ಮ ರಾಜ 'ನಾಳೆ ಬಾ ಅದನ್ನು ಕೊಡುತ್ತೇನೆ' ಎಂದನಂತೆ.

ಧರ್ಮ ರಾಜ ಹೇಳಿದ್ದು ಅಲ್ಲಿಯೇ ಇದ್ದ ಅವನ ಮಂತ್ರಿಯ ಕಿವಿಗೆ ಬಿತ್ತು. ಕೂಡಲೆ ಅವನು ಹೋಗಿ ನಗರದ ಮಧ್ಯೆ ಇದ್ದ ಜಯಭೇರಿ ಬಾರಿಸಿದ. ಜಯಭೇರಿಯ ಸದ್ದು ಕೇಳಿ ಆ ರಾಜ್ಯದ ಜನರು ಸೇರಿದರು. ಧರ್ಮ ರಾಜನೂ ಬಂದ. ಆ ಬಡವ ಯಾಚಕನೂ ಬಂದ.

"ಜಯಭೇರಿ ಬಾರಿಸಲು ನಿಮಿತ್ತವೇನು?" ಎಂದು ಎಲ್ಲರೂ ಕೇಳಿದರು

"ನಮ್ಮ ಮಹಾರಾಜರು ಒಂದು ದಿವಸದ ಮಟ್ಟಿಗೆ ಯಮನನ್ನು ಗೆದ್ದಿದ್ದಾರೆ. ಒಬ್ಬ ಬಡವನು ಕೇಳಿದ್ದನ್ನು ನಾಳೆ ಕೊಡುವೆನೆಂದು ಹೇಳಿದ್ದಾರೆ. ಈ ದಿನ ಅವರು ಸಾವನ್ನು ಜಯಿಸಿದ್ದಾರೆ ಎಂಬ ಖಾತ್ರಿ ಅವರಿಗಿದೆ, ಆದ್ದರಿಂದ ಸಂತೋಷಕ್ಕೆ ಈ ಜಯಭೇರಿ.

ಈ ಮಾತನ್ನು ಕೇಳಿ ರಾಜನಿಗೆ ನಾಚಿಕೆಯಾಗಿ, ಆ ಯಾಚಕನಿಗೆ ಏನು ಬೇಕೋ ಅದನ್ನು ಕೊಟ್ಟು ಕಳಿಸಿದನಂತೆ.

ಕರ್ಣನ ದಾನವನ್ನು ಕೇಳದವರು ಯಾರು?! ಒಂದು ಸಲ ಕರ್ಣ ಅಭ್ಯಂಜನ ಮಾಡುವುದಕ್ಕೆ ಎಣ್ಣೆ ಒತ್ತಿಕೊಳ್ಳುತ್ತಿದ್ದಂತೆ. ಎಡಗೈಯಲ್ಲಿ ಚಿನ್ನದ ಪಾತ್ರೆ, ಅದರಲ್ಲಿ ಪರಿಮಳದ ಎಣ್ಣೆ. ಬಲಗೈಗೆ ಹಾಕಿಕೊಂಡು ನೆತ್ತಿಗೆ ತಟ್ಟಿಕೊಳ್ಳುತ್ತಿದ್ದ.
ಆಗ ಅಲ್ಲಿಗೆ ಶ್ರೀ ಕೃಷ್ಣ ಬಂದನಂತೆ.

"ಕರ್ಣ, ಆ ಬಟ್ಟಲನ್ನು ನನಗೆ ದಾನ ಕೊಡು" ಎಂದನಂತೆ.
ಕೇಳಿದ ಕೂಡಲೆ ಕರ್ಣ ಎಡ ಕೈಯಲ್ಲಿದ್ದ ಬಟ್ಟಲನ್ನು ಎಡ ಕೈಯಿಂದಲೇ ಕೃಷ್ಣನಿಗೆ ನೀಡಿದ.

"ಏನಿದು ಕರ್ಣ?! ಕೊಡುವ ದಾನ ಎಡಗೈಯಲ್ಲಿ ಕೊಡಬಹುವುದೆ?! ಎಂದು ಕೃಷ್ಣ ಅಸಮಾಧಾನವನ್ನು ನಟಿಸುತ್ತಾ ಕೇಳಿದ.
"ಕೃಷ್ಣಾ, ಬಲದ ಕೈ ಎಣ್ಣೆಯಾಗಿತ್ತು. ಅದನ್ನು ತೊಳೆದುಕೊಂಡು ಬರುವುದರೊಳಗೆ ದಾನ ಕೊಡುವ ಮನಸ್ಸು ಎಲ್ಲಿ ಬದಲಾಗುತ್ತದೋ ಎಂದು ಹೆದರಿ, ಹೀಗೆ ಎಡಗೈಯಿಂದಲೇ ಕೊಟ್ಟೆ" ಎಂದ ಕರ್ಣ.
ಇದು ಕರ್ಣನ ಮನೋಧರ್ಮ.

"ಆಗ ಬಾ, ಈಗ ಬಾ, ಹೋಗಿ ಬಾ ಎನ್ನದಲೆ
ಆಗಲೇ ಕರೆದುಕೊಡುವವನ ಧರ್ಮ
ಹೊನ್ನಾಗದೆ ಬಿಡದು" ಎಂದಿದ್ದಾನೆ ನಮ್ಮ ಸರ್ವಜ್ಞ.

ಪಾತ್ರರಿಗೆ ದಾನ ಕೊಡುವಾಗ ಯೋಚಿಸಬಾರದು. ದಾನ ಮಾಡುವುದು ಮನುಷ್ಯನ ಸಹಜ ಧರ್ಮ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಅನರ್ಥದ ಟೀಕಾಚಾರ್ಯರು

'ಬನ್ನಿ ಗುರುಗಳೆ, ವಿಷ್ ಯೂ ಎ ಹ್ಯಾಪಿ ನ್ಯೂ ಇಯರ್' ಎಂದೆ.

'ಭಾರತೀಯ ಕಣಯ್ಯಾ ನೀನು, ಸ್ವಲ್ಪವಾದರೂ ಸು-ಸಂಸ್ಕೃತನಾಗಯ್ಯಾ' ಎಂದೇ ವರ್ಷಾರಂಭಗೈದರು ಟೀಕಾಚಾರ್ಯರು.

'ತಿಳಿಯುವ ರೀತಿಯಲ್ಲಿ ಹೇಳಿ ಗುರುಗಳೆ...'

'ಏತತ್ ಆಂಗ್ಲಸಂವತ್ಸರೇ ಶುಭಂ ಭವತು ಅಂತ ಹೇಳಯ್ಯಾ... ಕಾಲಕಾಲಕ್ಕೆ ಬದಲಾಗಬೇಕು. ಹೌ ಡೂ ಯೂ ಸ್ಟಾರ್ಟ್ ಯುವರ್ ಡೇ?'

'ಗುಡ್ ಓಲ್ಡ್ ಮೆಥಡ್ಡೇ ಗುರುಗಳೇ, ಕರಾಗ್ರೇ ವಸತೇ ಲಕ್ಷ್ಮೀ...'

"ಪೂರ್ ಓಲ್ಡ್ ಥಾಪ್. ಬೆಳಗಾಗೆದ್ದು ಆ taxation ಮಂತ್ರ ಹೇಳೋದೇ...? ಛೆಛೆ!'

'Taxation ಮಂತ್ರ????'

'ಹ್ಹ! ಅರ್ಥ ಗೊತ್ತಿಲ್ಲಾನ್ನು! ಕರಾಗ್ರೇ ವಸತೇ ಲಕ್ಷ್ಮೀ - ಕರ ಅಂದ್ರೆ ಟ್ಯಾಕ್ಸ್ ಅಲ್ವೇನಯ್ಯಾ... ಕರಾಗ್ರೇ ವಸತೇ ಲಕ್ಷ್ಮಿ ಅಂದ್ರೆ taxationಗೆ ಬೇಸಿಸ್ಸೇ ಲಕ್ಷ್ಮೀ ಉರುಫ್ money ಅಂತ ಅರ್ಥ.'

'ಕರಮಧ್ಯೇ ಸರಸ್ವತಿ?'

'ಎಜುಕೇಷನ್ನು ಕಣಯ್ಯಾ. ಸರಸ್ವತಿ... ಡೊನೇಷನ್ನು, ಟ್ಯೂಷನ್ನು, ಟುಟೋರಿಯಲ್ಲು... ಇವೆಲ್ಲಾ ಲಕ್ಷ್ಮಿ ಇದ್ದಾಗಲೇ ಅಲ್ಲವೇನಯ್ಯಾ, ಇವೂ ಒಂದು ವಿಧವಾದ ಟ್ಯಾಕ್ಸೇ... Taxingಊ ಹೌದು!'

'ಕರಮೂಲೇ ಸ್ಥಿತೇ ಗೌರಿ?'

'ಗೌರಿ is ವೈಟು. Only white money is taxable ಅಂತ ಅದರರ್ಥ'

'ಪ್ರಭಾತೇ ಕರದರ್ಶನಂ?'

'ಬೆಳಗಾಗೆದ್ದು ಯಾವ ಚಾನಲ್ ನೋಡು, ಪೇಪರ್ ನೋಡು, ಅದರ ಟ್ಯಾಕ್ಸ್ ಇಷ್ಟು ಏರಿದೆ, ಇದರ ಟ್ಯಾಕ್ಸ್ ಅಷ್ಟು ಹಾರಿದೆ ಅನ್ನೋ ಸುದ್ದೀನೇ... ಟ್ಯಾಕ್ಸ್ ಉರುಫ್ ಕರ; ಪ್ರಭಾತೇ - ಬೆಳ್ಳಂಬೆಳಗ್ಗೆಯೇ, ಕರ- ಟ್ಯಾಕ್ಸ್ (ಸಂಬಂಧಿತ ವಿಷಯಗಳು) ದರ್ಶನಂ. ತಿಳಿಯಿತೇನಯ್ಯಾ?'

'ಓಹ್! ತಿಳಿದಿರಲಿಲ್ಲ. ಆದರೆ.. ಬೆಳಗಾಗೆದ್ದು ಒಂದು ಮಂತ್ರ ಬೇಕಲ್ಲ, ಈಗ ಯಾವ ಮಂತ್ರ ಸರಿ?'

"ಕರಾಗ್ರೇ ವಸತೇ ವ್ಯಾಟ್ಸ್ ಅಪ್, ಕರಮಧ್ಯೇ ಚ ಲಿಂಕಡಿನ್, ಕರಮೂಲೇ ಸ್ಥಿತಾ ಟ್ವಿಟ್ಟರ್, ಪ್ರಭಾತೇ ಮೊಬೈಲ್ ದರ್ಶನಂ'

'ವಾಹ್! ಗುರುಗಳೇ... ಅಪ್ ಟು ಡೇಟ್ ಅಂದ್ರೆ ಇದು! ಸರಿ, ಎದ್ದ ನಂತರದ ಮಂತ್ರಗಳು?'

'ನೀನು ಟೀ ಕುಡೀತೀಯೋ, ಕಾಫೀನೋ?'

'ಟೀ'

'ಧರ್ಮೇಚಾ, ಅರ್ಥೇಚಾ, ಕಾಮೇಚಾ ನಾತಿಚರಾಮಿ'

'ಆದರೆ... ಇದು ಮದುವೆ ಮಂತ್ರ ಅಲ್ಲವೇ?'

'ಏನು ಮಹಾ ವ್ಯತ್ಯಾಸ? ಕುದಿಕುದಿಯುವ ನೀರೇ ಗಂಡು, ಹೊಂದಿಕೊಂಡು ಸಾಗುತ್ತಾ ದಿನಗಳೆದಂತೆ ಗಂಡನನ್ನು ಸಂಪೂರ್ಣ ಆವರಿಸಿಕೊಂಡು ತನ್ನ ಗುಣ ಮಾತ್ರ ಎದ್ದು ತೋರುವಂತೆ ಮಾಡುವ ಟೀ ಪುಡಿಯೇ ಹೆಣ್ಣು. ಲೋಟವೇ ಸಂಸಾರ. ಅದರ ಆನಂದ ಸವಿಯುವವರೇ ಬಂಧುಮಿತ್ರರು, ಆತ್ಮೀಯರು'

'ಸರಿ ಸರಿ; ಆ ಮಂತ್ರದ ನೇರ ಅರ್ಥವನ್ನಾದರೂ ಹೇಳಿ.'

'ಧರ್ಮೇಚಾ ಎಂದರೆ ಯಾರದೋ ಖರ್ಚಿನಲ್ಲಿ, ಧರ್ಮಕ್ಕೆ, ಕುಡಿಯುವ ಟೀ, ಅರ್ಥೇಚಾ ಎಂದರೆ ನಾವೇ ಕೊಟ್ಟು ಕುಡಿಯುವ ಟೀ, ಕಾಮೇಚಾ ಅಂದರೆ ಬಯಸಿದಾಗಲೆಲ್ಲ ಕುಡಿಯುವ ಟೀ, ನಾತಿಚರಾಮಿ ಎಂದರೆ ಯಾವುದೇ ಬಗೆಯಲ್ಲಿ ಟೀ ಕುಡಿದರೂ ಲಿಮಿಟ್ ಬಿಟ್ಟು ಕುಡಿಯುವುದಿಲ್ಲ ಅಂತ ಅರ್ಥ ಕಣಯ್ಯ'

'ಗ್ರೇಟ್; ಒಂದು ವೇಳೆ ಟೀ ಕುಡಿಯದೆ ಕಾಫಿ ಕುಡಿಯುವವನಾದರೆ?'

'ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ. ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ...' ಕುಲುಕುಲು ನಗುತ್ತಾ ನುಡಿದರು ಟೀಕಾಚಾರ್ಯರು.

'ಆದರೆ...?'

‘ಶುಕ್ಲಾಂಬರ – ಬಿಳಿಯ ಬಣ್ಣದ್ದು – ಹಾಲು; ವಿಷ್ಣುಂ – ಕಂದುಬಣ್ಣ ಅಥವಾ ಕಪ್ಪು ಬಣ್ಣದ್ದು – ಕಾಫಿಪುಡಿ; ಶಶಿವರ್ಣಂ – ಬಿಳಿಯಲ್ಲಿ ಕೊಂಚ ಕಡಿಮೆ ಇದ್ದು ಚಂದ್ರನ ಬಣ್ಣ ಇರುವುದು – ಸಕ್ಕರೆ; ಚತುರ್ಭುಜಂ – ನಾಲ್ಕನೆಯ ಭುಜ – ನೀರು; ಈ ನಾಲ್ಕನ್ನೂ ಬೆರೆಸಿ, ಹದವಾಗಿ ಹೀರಿರಲು ವದನದಲ್ಲಿ ಪ್ರಸನ್ನತೆ ಮೂಡುವುದೇ ಪ್ರಸನ್ನ ವದನಂ; ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ಎಂದರೆ ಈ ಕಾಫಿಯನ್ನು ಧ್ಯಾನಿಸಿ (ಪಡೆದರೆ) ಬೆಳಗಿನ ಕಿರಿಕಿರಿ ತಪ್ಪಿ, ಎಲ್ಲ ವಿಘ್ನಗಳೂ ತಪ್ಪುತ್ತವೆ’

‘ಸ್ನಾನದ ಸಮಯದಲ್ಲಿ ಗಂಗೇಚ ಯಮುನೇ ಚೈವ...’

‘ಸ್ಟಾಪ್! ಸಂಪುಶ್ಚ ಬೋರುವೈಲ್ ಚೈವ ಓವರ್ಹೆಡ್ ಟ್ಯಾಂಕ್, ಪ್ಯುರೀಫೈಯರ್, ಪಂಪುಶ್ಚ ಸೋಲಾರಶ್ಚೈವ ಜಲೇಸ್ಮಿನ್ ಮಾರ್ಜನಂ ಕುರು!’

‘ಆ ಮಂತ್ರ ಏಕೆ ಪ್ರಸ್ತುತವಲ್ಲ ಗುರುಗಳೆ?’

‘ನದಿಗಳ ನೀರು ಸಿಟೀಲಿ ಬರೋದು ವಾರಕ್ಕೋ, ಎರಡು ವಾರಕ್ಕೋ ಒಂದು ದಿನ. ಬೇಕಾದ್ರೆ ಆ ಮಂತ್ರ ಒನ್ಸ್ ಇನ್ ಎ ವೀಕ್ ಆರ್ ಫೋರ್ಟ್ ನೈಟ್ ಹೇಳ್ಕೊ. ಮಿಕ್ಕ ದಿವಸವೆಲ್ಲ ಸಂಪು, ಪಂಪು., ಇತ್ಯಾದಿಗಳೇ ಇರೋದ್ರಿಂದ ದಿಸ್ ಈಸ್ ದ ರೈಟ್ ಮಂತ್ರ ಮೈ ಪ್ಯೂಪಿಲ್ಲು’

‘ಹೋಗಲಿ, ಆ ಪ್ಯೂಪಿಲ್ ನ ಮಂತ್ರವಾದರೂ ರೀಟೈನ್ ಮಾಡಿಕೊಳ್ಳಬಹುದಾ?’

‘ಯಾವುದು?’

‘ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ, ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ’

‘ವೈ ನಾಟ್? ಸ್ಲೈಟ್ ಚೇಂಜ್ ಮಾಡ್ಕೋಬೇಕಷ್ಟೆ.’

‘ಏನು?’

‘ಫಸ್ಟ್ ಹಾಫ್ ನಲ್ಲಿ ‘ಕಾಮರೂಪಿಣ’ ಇದೆಯಲ್ಲಾ, ಅದನ್ನ ‘,’ ರೂಪಿಣಿ, ಅಂತ ಬಕೋರ್ಮೆ.’

‘ಅಂದರೆ?’

‘ವರ್ಡ್ಸ್ ಬದಲು ಪಂಕ್ಚುಯೇಷನ್ ಮಾರ್ಕ್’

‘ಯಾಕೆ?’

‘ವಿದ್ಯೆಗೆ ಕೊನೆಯಿಲ್ಲ, ಅಂದ್ರೆ ಫುಲ್ ಸ್ಟಾಪ್ ಇಲ್ಲ. ‘.’ ಇಲ್ಲವಾದ್ದರಿಂದ ‘,’!’

‘ಒಪ್ಪಿದೆ’

‘ಸೆಕೆಂಡ್ ಹಾಫ್ ನಲ್ಲಿ ಮೇ ಸದಾ ಅನ್ನೋದ್ರಲ್ಲಿ ಮೇ ಅನ್ನೋದನ್ನ May ಅಂತ ಬರಿ’

‘ಯಾಕೆ?’

‘May ತಿಂಗಳಲ್ಲೇ ಪ್ರಮುಖ ಪರೀಕ್ಷೆಗಳ ರಿಸಲ್ಟ್ ಬರೋದು, ಸಿಇಟಿ ರಿಸಲ್ಟ್ಸ್ ಗೊತ್ತಾಗೋದು, ಡೊನೇಷನ್ ಫಿಕ್ಸ್ ಆಗೋದು, ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಸೀಟ್ ಗಳ ರೇಟ್ ಫಿಕ್ಸ್ ಆಗೋದು, ಹಾಸ್ಟೆಲ್ ಗಳು ಸಿಗತ್ವೋ ಇಲ್ವೋ ಅಂತ ಗೊತ್ತಾಗೋದು. ಆದ್ದರಿಂದ ಸಿದ್ಧಿರ್ಭವತು May ಸದಾ – ಮೇ ತಿಂಗಳು ನಮಗೆ ಸಿದ್ಧಿಸಲಿ, ಮಿಕ್ಕ ಎಲ್ಲ ತಿಂಗಳೂ ಹೇಗಿದ್ದರೂ ಪರವಾಗಿಲ್ಲ ಅನ್ನೋದೇ ಆ ಮಂತ್ರದ ಅರ್ಥ’

‘ಆಹಾ! ಗುರುಗಳೇ. ನೀವೋ... ನಿಮ್ಮ ಅನರ್ಥವೋ... ಅದಕ್ಕೇ ಅಂದಿನ ಶಿಷ್ಯರು ಹಾಗೆ, ಇಂದಿನ ಶಿಷ್ಯರು ಹೀಗೆ ಹೇಳುತ್ತಿರುವುದು’ ಎಂದೆ.

‘ಹೇಗೆ?’

‘ಅಂದಿನವರು ಗುರವೇ ನಮಃ ಎನ್ನುತ್ತಿದ್ದರು. ಈಗಿನವರು ಗುರು ಏನು ಮಹಾ ಅಂತಾರೆ. ಸಾಕು ಮಾಡಿ ಗುರುವರ್ಯಾ ನಿಮ್ಮ ಈ ಅಸಂಬದ್ಧತೆಯನ್ನು’ ಎನ್ನುತ್ತಾ ಕೈಮುಗಿದೆ.

‘ಯೂ ಅಂಡ್ ಯುವರ ಓಲ್ಡ್ ಸ್ಕೂಲ್ ಆಫ್ ಥಾಟ್ಸ್ ಬಿ ಡ್ಯಾಮ್ಡ್. ನಾನು ಹೊರಡ್ತೀನಿ. ನಮಸ್ಕಾರ ಮಾಡು. ಆಶೀರ್ವಾದ ಮಾಡ್ತೀನಿ’ ಎಂದರು.

ಕಾಲಿಗೆರಗಿದೆ.

‘ಸಪ್ತಸಾಗರಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು’ ಎಂದರು.

‘ಅದು ಚತುಸ್ಸಾಗರ ಅಲ್ಲವೇ ಗುರುಗಳೆ?’

‘ಮಂತ್ರ ಬರೆದಾಗ ನಾಲ್ಕೇ ಗೊತ್ತಿದ್ದಿದ್ದು. ಆಮೇಲೆ ಕೊಲಂಬಸ್ಸು, ಕೊಲಂಟ್ಸೈನು, ಕೊಲಂಪ್ಲೇನು ಎಲ್ಲ ಸೇರಿ ಇನ್ನೂ ಮೂರು ಸಮುದ್ರ ಕಂಡುಹಿಡಿದ್ರಲ್ಲ, ಈಗ ಸಪ್ತಸಾಗರಪರ್ಯಂತಮ್ಮೇ ಸರಿ’

‘ಓಕೆ. ಗೋಬ್ರಾಹ್ಮಣ ಅಂದ್ರೆ ಏನು?’

‘ಗೋ ಅನ್ನೋದು ಇಂಗ್ಲಿಷ್; G & O. ಜಿ ಅಂದ್ರೆ ಗವರ್ನಮೆಂಟ್ ಬ್ರಾಹ್ಮಣರು, ಓ ಅಂದ್ರೆ ಓಂಕಾರದ ಮೂಲಕ ಬ್ರಾಹ್ಮಣರು. ಎಲ್ಲರಿಗೂ ಒಳ್ಳೇದಾಗಲು ಅನ್ನೋದೇ ಇದರ ಅರ್ಥ’ ಎಂದು ಎಕ್ಸ್ ಪ್ಲೇಯ್ನಿಸಿದ ಗುರುಗಳು ‘ಬರ್ತೀನಯ್ಯಾ, ಹಬ್ಬದ ದಿನ ಅಲ್ವಾ, ಮನೇಲಿ ಅಪ್ಪ, ಅಮ್ಮ, ಬಂಧುಮಿತ್ರರೆಲ್ಲಾ ಇರ್ತಾರೆ. ಸ್ವಲ್ಪ ಲೇಟ್ ಆದ್ರೆ ಮಾತಾ nasty, ಪಿತಾ nasty, nasty ಬಂಧುಃಸಖಾ ಮಮ ಆಗ್ತಾರೆ. ಸೀ ಯೂ. ಬೈ’ ಎನ್ನುತ್ತಾ ತಮ್ಮ ಕಾರ್ ಏರಿದರು.

‘ಗುರುಗಳೇ, ಕಾರ್ ಡ್ರೈವಿಂಗ್ ಗೂ ಒಂದು ಮಂತ್ರ...?’

‘ಇದೆಯಲ್ಲಾ... ಬಂಧಮೋಕ್ಷಕಮ್ ಆದಾಯ.. ಕೀ ತೊಗೊಳ್ಳೋದು; ರಂಧ್ರೇ ನಿಕ್ಷಿಪ್ಯ – ಅದಕ್ಕಾಗಿ ಇರುವ ಸ್ಲಾಟ್ ನಲ್ಲಿ ಇಡೋದು, ಪುರಾಭಿಮುಖ ಚಾಲನಂ ಕೃತ್ವಾ – ಮುಂದಕ್ಕೆ ಚಲಾಯಿಸುವುದರ ಮೂಲಕ ಸ್ಟಾರ್ಟ್ ಮಾಡಿ; ನಿರ್ಬಂಧಕಂ ವಿಮೋಕ್ಷ್ಯ – ಕ್ಲಚ್ ಬಿಟ್ಟು, ವೇಗವರ್ಧಕ ಚಾಲನಂ ಕೃತ್ವಾ– ಆಕ್ಸಿಲೇಟರನ್ನು ಒತ್ತಿ, ತ್ವರಿತಂ ಪುರತಃ ಗಚ್ಛಾಮಃ – ವೇಗವಾಗಿ ಮುಂದಕ್ಕೆ ಹೋಗೋಣ; ಎನ್ನುತ್ತಾ ನೋಡುನೋಡುತ್ತಿದ್ದಂತೆಯೇ ಸರ್ ರ್ ರ್ ಎಂದು ಮುನ್ನುಗ್ಗಿ ಕಿರ್ ರ್ ರ್ ರ್... ಎಂದು ಬ್ರೇಕನ್ನು ಸ್ಕ್ರೀಚಿಸುತ್ತಾ ಟರ್ನಿಂಗ್ ನಲ್ಲಿ ಸ್ಕಿಡ್ಡಿಸುತ್ತಾ ಮರೆಯಾದರು.

ಅವರು ಹೋದ ಸ್ಪೀಡಿನಿಂದ ಭೀತನಾದ ನಾನು ಹನುಮಾನ್ ಚಾಳೀಸ ಗುನುಗುತ್ತಾ ಮನೆಯತ್ತ ಹೆಜ್ಜೆ ಹಾಕಿದೆ. ■

ಸುಮ್ಮಿ ನಕ್ಬಿಡಿ



ತಮ್ಮ, ವಿಮಾನ ಸ್ವಲ್ಪ ತಡವಾಗಿ ಹೊರಡುವುದು ಅಲ್ಲಿಯವರೆಗೂ ಬೆಳಗ್ಗಿನ ತಿಂಡಿ 10 ಕ್ಕೆ, ಮಧ್ಯಾನ್ಹದ ಊಟ 2 ಕ್ಕೆ ರಾತ್ರಿ ಊಟ 8 ಕ್ಕೆ ಮಾಡಲು ಕ್ಯಾಂಟೀನ್ ಕಡೆ ದಯಮಾಡಿ ತೆರಳಬೇಕಾಗಿ ವಿನಂತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ವ್ಯಾಪಾರ ಬುದ್ಧಿ

ಕನಕಾಪುರ ನಾರಾಯಣ

ಆಶ್ರಮವೊಂದರಲ್ಲಿ ಹತ್ತಾರು ವಿಧ್ಯಾರ್ಥಿಗಳು ಕಲಿಯುತ್ತಿದ್ದರು.ಅವರಲ್ಲಿ ಒಬ್ಬ ಹುಡುಗ ಬೇರೊಬ್ಬರ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ.ಗುರುಗಳಿಗೆ ದೂರು ಕೊಟ್ಟರೂ ಅವರು ಸುಮ್ಮನೆ ಇದ್ದರು.ಒಂದು ದಿನ ಅವನ ಕಳ್ಳತನ ಮಿತಿಮೀರಿ ದೂರು ಕೊಟ್ಟರೂ ತಮ್ಮ ಗುರುಗಳೂ ಆತನಿಗೆ ಏನೂ ಕ್ರಮ ತೆಗೆದುಕೊಳ್ಳದಿರುವುದನ್ನು ಕಂಡು ಬೇರೆ ವಿದ್ಯಾರ್ಥಿಗಳೆಲ್ಲಾ ಆ ಶ್ರಮವನ್ನೇ ತ್ಯಜಿಸಿ ಹೋಗಲು ನಿರ್ಧರಿಸಿದರು.ಆಗ ಗುರುಗಳು ವಿಷಯ ತಿಳಿದು ಎಲ್ಲರನ್ನೂ ಕರೆದು"ಮಕ್ಕಳೇ ನೀವೆಲ್ಲಾ ಒಳ್ಳೆಯ ಮಕ್ಕಳು ಇಲ್ಲಿಂದ ಹೊರಟರೂ ನಿಮಗೆ ಬೇರೆ ಆಶ್ರಮ ಸೇರುವುದು ಕಷ್ಟವಿಲ್ಲ,ಆದರೆ ನಿಮ್ಮ ಸಹೋದರನಿಗೆ ಎಲ್ಲಿ ಆಶ್ರಯ ಸಿಗುತ್ತದೆ ಹೇಳಿ,ಅವನಿಗಿನ್ನೂ ತಪ್ಪು-ಸರಿಗಳ ಅರಿವೇ ಇಲ್ಲ,ನೀವೆಲ್ಲಾ ಹೋದರೂ ಆತನನ್ನು ಕೈಬಿಡುವಹಾಗಿಲ್ಲ ನಾನು" ಎಂದರು. ತುಂಟ ಹುಡುಗನ ಕಣ್ಣಿನಿಂದ ಕೆನ್ನೆಯ ಮೇಲೆ ನೀರು ಹರಿಯಿತು.ತನ್ನ ತಪ್ಪನ್ನರಿತು ಕ್ಷಮೆ ಯಾಚಿಸಿದ ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ “ಚಕ್ಕೆ ಮೊಗ್ಗು”

ಸುದರ್ಶನ್. ಏನ್
ಇವರ “ಅನಿವಾಸಿ”



ಬದರಿ ತ್ಯಾಮಗೊಂಡ್ಲು
ಇವರ “ಕಾವ್ಯ ಕಸ್ತೂರಿ”

ಸ್ಮಿತಾ ಮೇಲ್ಕೋಟೆ
ಇವರ “ಮಂದಹಾಸ”

ಅಮೃತ ಪಾನಕ

ಬೇಕಾಗುವ ಸಾಮಗ್ರಿಗಳು

- ಕಳತಾದ ಹುಣಸೇ ಹಣ್ಣು ಒಂದು ನಿಂಬೇ ಗಾತ್ರ
- ಕರಿ ಮೆಣಸಿನ ಪುಡಿ ಚಿಟಿಕೆ
- ಬೆಲ್ಲ (ಸಿಹಿಗೆ) ನಾಲ್ಕು ಚಮಚ
- ಉಪ್ಪು ಚಿಟಿಕೆ

ಮಾಡುವ ವಿಧಾನ

- ಹುಣಸೇಹಣ್ಣನ್ನು ಐದು ನಿಮಿಷ ನೀರಿನಲ್ಲಿಟ್ಟು ಅನಂತರ ಕಿವುಚಿ ಚರಟ ಎಸೆಯಿರಿ.
- ಎರಡು ಮೂರು ಲೋಟ ಪ್ರಮಾಣದಷ್ಟು ನೀರಿಗೆ ಹುಳಿ ಸೇರಿಸಿ
- ಬೆಲ್ಲ,ಉಪ್ಪು ಸೇರಿಸಿ ಕದಡಿರಿ.

**ಶೀತ ಪ್ರಕೃತಿಯ ಖಾರ ಪ್ರಿಯರಿಗೆ ತುಸು ಕರಿಮೆಣಸಿನ ಪುಡಿ ಬೆರೆಸಿ ಕೊಡಿ.

**ಪಿತ್ತಹರವಾದ ಈ ಪಾನಕ,ಪಿತ್ತದ ವಾತಕ್ಕೂ ಉಪಶಮನ ಕೊಡುತ್ತದೆ.

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧. ಹರಿಯ ಸುತನು, ಕಾಮ ಇವನು, ಎಂದು ಅರ್ಥನುಡಿಯುವುದು, ಮೂರಕ್ಷರ ಸೇರಿದಾಗ ಇದಕೆ ರೂಪ ಪಡೆಯುವುದು ?
೨. ಸೊಕ್ಕು ಎಂಬ ಅರ್ಥ ಉಂಟು ಮೊದಲೆರೆಡಕ್ಷರ ಸೇರಲು
೩. ಪ್ರಾಣಿ ಎಂದು ನುಡಿಯುತಿಹುದು ಕೊನೆಯೆರಡಕ್ಷರ ಸೇರಲು
೪. ಚಿತ್ತ ಎಂದು ಅರ್ಥ ಇದಕೆ ಒಂದು ಮೂರು ಸೇರಲು

ಉತ್ತರಕ್ಕೆ ಪುಟ ೧೩ ನೋಡಿ

ನೀನಿರದಾ ವಿಚಾರ

ಈ ತೀರ ವಿಶಾಲ ಸುಶೀಲ
ಸುಧಾರ ವಿನೋದ ವಿಹಾರ
ಸುಮೋದ ಅಮೋದ ಪ್ರಮಾದ
ನೀನಿರದಾ ವಿಚಾರ

ಈ ನೀಲ ಸುನೀಲ ವಿಶಾಲ
ಅತೀತ ಸುನೀತಾ ಸುಪ್ರೀತ
ಅಘೋರ ಅಪಾರ ಸಮೀರ
ನೀನಿರದಾ ವಿಚಾರ

ಈ ತಾರ ಸಿತಾರ ಪ್ರಕಾರ
ಸಹನಾ ಅಸಹನ ಮದನಾ
ಸಕಾರ ಶರೀರಾ ವಿಕಾರ
ನೀನಿರದಾ ವಿಚಾರ

ಈ ಪಾನ ಸ್ವಪಾನ ಸೋಪಾನ
ಅಲ್ಲೋಲ ಕಲ್ಲೋಲ ಸುಲೀಲ
ಅಧೀರೆ ಸುನೀರೆ ಸುಧೀರ
ನೀನಿರದಾ ವಿಚಾರ

ರಚನೆ: ಮಾಲು, ಅಡಿಲೇಡ್

ಹಾಸ್ಯ ಚಿಲುಮೆ

ಸರದಾರ್ ಜೂಸ್ ಬಾಟಲನ್ನೆ ಬಹಳ ಹೊತ್ತು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಲೇ ಇದ್ದದ್ದನ್ನು ಕಂಡು ಮತ್ತೊಬ್ಬ ಯಾಕೆಂದು ಕೇಳಿದ.ಅದಕ್ಕೆ ಸರ್ದಾರ್ ಹೇಳಿದ `ಅದರಮೇಲೆ CONCENTRATE ಅಂತ ಬರೆದಿದೆ?

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಬನವಾಸಿಯು ಕರ್ನಾಟಕದ ಯಾವ ರಾಜವಂಶದ ರಾಜಧಾನಿಯಾಗಿತ್ತು. ಇಲ್ಲಿರುವ ಪ್ರಮುಖ ದೇವಾಲಯ ಯಾವುದು?

೨. ಗದುಗಿನಲ್ಲಿರುವ ಖ್ಯಾತ ದೇವಾಲಯ ಯಾವುದು? ಇಲ್ಲಿ ರಚಿತವಾದುದೆಂದು ಹೇಳಲಾಗುವ ಕನ್ನಡದ ಪ್ರಸಿದ್ಧ ಕಾವ್ಯ ಯಾವುದು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಮದನ ೨.ಮದ ೩.ದನ ೪.ಮನ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಮಾತುಕತೆಗಳಾದ ನಂತರ, ಇನ್ನು ಈ ಮದುವೆ ಖಂಡಿತವೆಂದು ಆಚರಿಸುವ ಸಮಾರಂಭ.

೨. ವಿಶಿಷ್ಟವಾದ ಮಡಕೆಯನ್ನು ಬೋರಲು ಹಾಕಿ ಬಾರಿಸಿದರೆ, ಅದಕ್ಕೆ ಬೇರೊಂದು ಹೆಸರೇ ಬಂತು.

೩. ಈ ಅತಿ ಪುಟ್ಟ ನಗರದಲ್ಲಿರುವವರೆಲ್ಲರೂ ಅಗ್ನಿಗೆ ಆಹುತಿಯಾಗುವವರೇ!

೪. ದೊಡ್ಡವಳಿಗೊಂದು, ಕಿರಿಯವಳಿಗೊಂದು ಎಂದು ಕೊಟ್ಟರೂ, ಕಿರಿಯಪುತ್ರಿಯ ಊರೇ ದೊಡ್ಡದಾಯಿತಲ್ಲ?

೫. ನಡುವು ಬಳ್ಳಿಯಂತಾಡುವ ಪರಿ.

ಮಾಡಬೇಕಾದ ಪದ:

ನಮ್ಮ ರಾಜ್ಯದ ಹವಾಮಾನದಲ್ಲಿ ಪ್ರಮುಖ ಪಾತ್ರವಹಿಸುವ ಈ ಭೌಗೋಳಿಕ ರಚನೆ, ಹಸಿರಿನ ಸಿರಿ, ಸೌಂದರ್ಯದ ಖನಿ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜನವರಿ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಡಿಸೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ
- ಚಂದ್ರಿಕ ಉದಯ್, ಸಿಡ್ನಿ
- ಹರಿಣಿ ರಾವ್, ನವದೆಹಲಿ

ಡಿಸೆಂಬರ್ ತಿಂಗಳ ಪದ ಪುಂಜದ ೪ ನೇ ಪ್ರಶ್ನೆಯ ಶೇಡಿಂಗ್ ತಪ್ಪಾಗಿ ಬಿಂಬಿತವಾಗಿತ್ತು (ಎರಡನೇ ಮನೆ ಬದಲು ಮೊದಲ ಮನೆ). ಈ ತಪ್ಪನ್ನು ನಮ್ಮ ಗಮನಕ್ಕೆ ತಂದ ವತ್ಸಲಾ ದ್ವಾರಕನಾಥ್ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತ, ಆಗಿರುವ ದೋಷಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇವೆ -ಸಂ

ಡಿಸೆಂಬರ್ ತಿಂಗಳ ಪದಪುಂಜದ ಉತ್ತರ

೧. ತನ್ನನ್ನು ತಾನೇ ಕೊಟ್ಟುಕೊಳ್ಳುವವಳು ಅರ್ಪಣ ಳನ್ನು ಹೋಲುತ್ತಾಳಲ್ಲ.

ಅ	ರ್ಪ	ಣ

೨.ಬರಹ ಸರಿಯಿಲ್ಲವೆಂದು ಚಚ್ಚಿಕೊಳ್ಳಲು ಸುಲಭವಾಗಿ ಸಿಗುವ ಜಾಗ.

ಹ	ಣೆ

೩. ಯಮನಿಗೂ, ತಾಳ್ಮೆಗೂ, ಸಂಬಂಧ ಉಂಟೇ?

ಸಂ	ಯ	ಮ

೪. ಅತುರ ಪಡಬೇಡಿ, ಭಗ್ನಗೊಳಿಸುತ್ತಿಲ್ಲ, ಕೇವಲ ಅರಿಕೆ ಮಾಡಿಕೊಳ್ಳುತ್ತಿದ್ದೀವಷ್ಟೆ.

ಬಿ	ನ್ನ	ಹ

೫. ಅವನನ್ನು "ನೀನು ಕೀಟಲೆ ಬುದ್ಧಿಯವ" ಎಂದು ಕರೆದರೆ, "ತನ್ನಿ" ಎನ್ನುವುದೇ!

ತ	ರ	ಲೆ

ಉತ್ತರ: ತೇರೆಳೆದಾದ ಮೇಲೆ ದೇವಾಲಯದಲ್ಲಿ ನಡೆಯುವ ಭರ್ಜರಿ ಭೋಜನ ಕೂಟ.

ಅ	ನ್ನ	ಸಂ	ತ	ರ್ಪ	ಣೆ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಚನೆ: ವಿಭಾ. ಎ. ನಾಡಿಗ್, ಬೆಂಗಳೂರು - ೯ ವರ್ಷ

ಕರ್ನಾಟಕವನ್ನಾಳಿದ ರಾಜವಂಶಗಳು – ಭಾಗ ೩

ಲೇಖಕರು:
ನಾಗಶೈಲ ಕುಮಾರ್

ಕರಾವಳಿಯ ಆಳುಪರು - ಸುಮಾರು ಕ್ರಿ.ಶ.೧೦೦- ೧೬೦೦. ಆಳುಪರ ಆಡಳಿತದ ಆರಂಭ ಮತ್ತು ಅಂತ್ಯದ ಬಗ್ಗೆ ಖಚಿತವಾದ ವರ್ಷಗಳು ತಿಳಿದಿಲ್ಲ. ಆದರೆ ಅವರು ಬಲು ದೀರ್ಘಾವದಿಯ ಆಡಳಿತ ನಡೆಸಿದ್ದರೂ, ತಾವೇ ಸ್ವತಂತ್ರ ರಾಜರಾಗಿ ಅಧಿಕಾರ ಹೊಂದಿದ್ದು ಬಲು ಕಡಿಮೆ. ತಮ್ಮ ೧೦೦೦ ವರ್ಷಗಳಿಗೂ ಹೆಚ್ಚು ಕಾಲದ ಅವಧಿಯಲ್ಲಿ, ಕದಂಬರು, ಚಾಲುಕ್ಯರು ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಹೀಗೆ ಇತರ ಪ್ರಮುಖ ರಾಜವಂಶಗಳ ಅಧೀನದಲ್ಲಿ ಆಡಳಿತ ನಡೆಸಿದಂತೆ ತೋರುತ್ತದೆ. ಆದರೂ ಈ ಎಲ್ಲಾ ಪ್ರಮುಖ ರಾಜವಂಶಗಳ ಜೊತೆಯಲ್ಲಿ ವೈವಾಹಿಕ ಸಂಬಂಧ ಬೆಳೆಸಿ, ಅವರು ನಡೆಸಿದ ಯುದ್ಧಗಳಲ್ಲಿ ಸಹಾಯಕರಾಗಿ, ಹಲವೊಮ್ಮೆ ಅವರಿಂದಲೇ ಹತರಾಗಿ, ಬಲು ದೀರ್ಘಕಾಲ ಅಧಿಕಾರದಲ್ಲಿದ್ದ ಸಾಧನೆ ಆಳುಪರದು.

ಆರಂಭದಲ್ಲಿ ಮಂಗಳಾಪುರ ಅಥವಾ ಮಂಗಳೂರು ಇವರ ರಾಜಧಾನಿಯಾಗಿದ್ದು, ನಂತರದ ದಿನಗಳಲ್ಲಿ ಉಡುಪಿ ಬಳಿಯ ಉದ್ಯಾವರ ಹಾಗೂ ಬಾರಕೂರುಗಳಿಂದ ಆಳಿದ್ದರು. ಮೊದಲಿಗೆ ತಿಳಿದು ಬಂದಿರುವ ಆಳುಪ ದೊರೆ ಪಶುಪತಿ. ಇವನ ಬಗ್ಗೆ ಕದಂಬರ ಹಲ್ಮಿಡಿ ಶಾಸನದಲ್ಲಿ ಉಲ್ಲೇಖವಿದೆ. ಅಳುವರಸ I ಎಂಬ ದೊರೆ ಚಾಳುಕ್ಯರ ಎರಡನೆಯ ಪುಲಿಕೇಶಿಯ ಮಾವ. ನಂತರದ ದಿನಗಳಲ್ಲಿ ಚಿತ್ರವಾಹನ ಎಂಬ ಆಳುಪ ದೊರೆಯನ್ನು ಚಾಳುಕ್ಯ ವಿಜಯಾದಿತ್ಯನ ಪುತ್ರಿ ಕುಂಕುಮ ದೇವಿಯು ವಿವಾಹವಾಗಿದ್ದಳು.ಚಿತ್ರವಾಹನ, ಕುಂದವರ್ಮ, ಜಯಸಿಂಹ, ಪಟ್ಟಿಯೊಡೆಯ, ಪಾಂಡ್ಯ ಪಟ್ಟಿಯೊಡೆಯ, ಪಟ್ಟಿಯೊಡೆಯ ಕುಲಶೇಖರ, ವೀರಪಾಂಡ್ಯ, ರಾಣೇ ಬಲ್ಲ ಮಹಾದೇವಿ, ಕುಲಶೇಖರ, ಕುಲಶೇಖರ III, ಇವರುಗಳು ಆಳುಪ ಕುಲದ ಪ್ರಮುಖ ಅರಸರುಗಳು. ಹೊಯ್ಸಳ ದೊರೆ ವೀರಬಲ್ಲಾಳ III, ಆಳುಪ ರಾಜಕುವರಿ ಕೃಷ್ಣಾಯಿತಾಯಿ ಯನ್ನು ವರಿಸಿದ್ದು, ಇವರೀರ್ವರ ಪುತ್ರ ಕುಲಶೇಖರನೂ ಆಳುಪರ ಪ್ರಮುಖ ದೊರೆಯಾಗಿದ್ದ.

ಅವಲೋಕಿತೇಶ್ವರ

ಆಳುಪರು ಶೈವರಾಗಿದ್ದು, ಜೈನ, ಬೌದ್ಧ, ವೈಷ್ಣವ ಧರ್ಮಗಳೂ ಆಚರಣೆಯಲ್ಲಿತ್ತು. ಆಚಾರ್ಯ ಶಂಕರರ ಪ್ರಭಾವ ವಿಶೇಷವಾಗಿದ್ದು, ಸ್ಕಂದ, ದುರ್ಗೆ, ವಿಷ್ಣು ಆರಾಧನೆ ಜನಪ್ರಿಯವಾಗಿತ್ತು. ಇವರ ಕಾಲದಲ್ಲಿಯೇ ಮಧ್ವಾಚಾರ್ಯರ ಜನನವಾಗಿ ವೈಷ್ಣವ ಪಂಥ ಹರಡಿತು. ಇವರ ಪ್ರದೇಶವು ಬಂದರುಗಳಿಂದ ಕೂಡಿತ್ತಾಗಿ, ಹೊರಗಿನಿಂದ ಬಂದ ಮುಸಲ್ಮಾನರೂ ಬಲವಾಗಿ ನೆಲೆಯಾಗಿ, ಬಹುವಾಗಿ ವ್ಯಾಪರದಲ್ಲಿ ತೊಡಗಿದ್ದರು.

ಇವರ ಕಾಲದ ಪ್ರಮುಖ ರಚನೆಗಳೆಂದರೆ, ಕದಿರೆಯ ಅವಲೋಕಿತೇಶ್ವರ, ಬಾರಕೂರಿನ ಪಂಚಲಿಂಗೇಶ್ವರ, ಬ್ರಹ್ಮಾವರದ ಬ್ರಹ್ಮಲಿಂಗೇಶ್ವರ, ಕೋಟೇಶ್ವರದ ಕೋಟಿನಾಥ, ಸೂರತ್ಕಲ್ ನ ಸದಾಶಿವ.

ಕಲ್ಯಾಣದ ಚಾಲುಕ್ಯರು – ೯೭೩ ರಿಂದ ೧೧೯೨ : ಕಲ್ಯಾಣದ ಚಾಳುಕ್ಯರು, ಬಾದಾಮಿಯ ಚಾಳುಕ್ಯರ ವಂಶಜರೆಂದು ಹೇಳಿಕೊಂಡಿದ್ದಾರೆ. ಇವರು ರಾಷ್ಟ್ರಕೂಟರನ್ನು ಸೋಲಿಸಿ, ೯೭೩ ರಿಂದ ತಮ್ಮ ಅಧಿಕಾರ ಆರಂಭಿಸಿದರು. ತೈಲII ಇವರ ಮೊದಲ ದೊರೆ. ಇವರ ಆಳ್ವಿಕೆಯ ಬಗ್ಗೆ ವಿಫುಲವಾಗಿ ಶಾಸನಗಳು ದೊರೆತಿವೆ.

ರಾಷ್ಟ್ರಕೂಟರ ಮಾಂಡಲೀಕನಾಗಿದ್ದ ತೈಲೋಕ್ಯಮಲ್ಲ ಅಥವಾ ತೈಲ ೯೭೨ ರಲ್ಲಿ ರಾಷ್ಟ್ರಕೂಟರ ರಾಜಧಾನಿ ಮಳಖೇಡವನ್ನು ವಶಪಡಿಸಿಕೊಂಡು ಅಧಿಕಾರ ವಹಿಸಿಕೊಂಡ. ಚೋಳ, ಪರಮಾರ, ಶಿಲಾಹಾರ ಮುಂತಾದವರನ್ನು ಸೋಲಿಸಿ, ಹೊಸದಾಗಿ ಸ್ಥಾಪಿತವಾದ ತನ್ನ ಸಾಮ್ರಾಜ್ಯಕ್ಕೆ ಭದ್ರವಾದ ಬುನಾದಿ ಹಾಕಿ, ೨೪ ವರ್ಷಗಳ ಕಾಲ ರಾಜ್ಯಭಾರ ನಡೆಸಿದ. ಇವನ ಮಗ ಸತ್ಯಾಶ್ರಯ ಕನ್ನಡದ ಖ್ಯಾತಕವಿ ರನ್ನನ ಗಧಾಯುದ್ಧ ದ ಭೀಮನ ಪಾತ್ರದಲ್ಲಿ ಲೀನವಾಗಿ ಕನ್ನಡ ಸಾಹಿತ್ಯದಲ್ಲಿ ಅಮರನಾಗಿದ್ದಾನೆ. ನಂತರದಲ್ಲಿ ಜಯಸಿಂಹ II ಚೋಳರೊಡನೆ ಹೋರಾಡುತ್ತಲೇ ೨೮ ವರ್ಷಗಳು ರಾಜ್ಯಭಾರ ಮಾಡಿದ.

ಬಾದಾಮಿಯ ಗುಹಾಂತರ ದೇವಾಲಯ

ಸೋಮೇಶ್ವರ I ಈ ವಂಶದ ಗಣ್ಯ ಅರಸರಲ್ಲಿ ಒಬ್ಬ. ೧೦೪೩ ಈತನು ಪಟ್ಟವೇರಿದ. ಈತನೂ ತನ್ನ ರಾಜ್ಯಭಾರದುದ್ದಕ್ಕೂ ಚೋಳರ ಜೊತೆ ಸೆಣಸುತ್ತಲೇ ಇರಬೇಕಾಯಿತು. ಸೋಲು ಗೆಲುವು ಎರಡೂ ಈತನಿಗೆ ಸಾಮಾನ್ಯವಾಗಿತ್ತು. ಆದರೂ ಕಳೆದುಕೊಂದ ಪ್ರದೇಶಗಳನ್ನೆಲ್ಲ ಮತ್ತೆ ವಶಪಡಿಸಿಕೊಳ್ಳುವುದರಲ್ಲಿ ಈತ ಯಶಸ್ವಿಯಾಗುತ್ತಿದ್ದ. ಕೇವಲ ಚೋಳರಷ್ಟೇ ಅಲ್ಲದೆ, ಧಾರಾದ ಪರಮಾರ ಭೋಜ, ಕೊಂಕಣದ ಶಿಲಾಹಾರ, ಸೇವುಣ, ಮುಂತಾದವರ ಜೊತೆ ಯದ್ಧ ಮಾಡುತ್ತಲೇ ತನ್ನ ಸಮ್ರಾಜ್ಯವು ಕುಂದದಂತೆ ಕಾಪಾಡಿಕೊಂಡು ಬಂದ ಸೋಮೇಶ್ವರ.

ಮುಂದಿನ ಪುಟ ನೋಡಿ ...

ವಿಕ್ರಮಾದಿತ್ಯ VI ಕಲ್ಯಾಣದ ಚಾಳುಕ್ಯ ವಂಶದಲ್ಲಿ ಮಾತ್ರವಲ್ಲ, ಕರ್ನಾಟಕದ ಶ್ರೇಷ್ಠ ಅರಸರಲ್ಲಿ ಒಬ್ಬನು. ಎಲ್ಲೆಡೆಯೂ ಶತೃಗಳನ್ನು ಸಂಹರಿಸಿ, ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿ, ಪ್ರಜೆಗಳಿಗೆ ಪ್ರಿಯನಾದವನೂ, ಕಲಾಪೋಷಕನೂ, ಕವಿ ವಿದ್ವಾಂಸರ ಆಶ್ರಯಧಾತನೂ ಆಗಿ, ೬೧ ವರ್ಷಗಳಷ್ಟು ಧೀರ್ಘಕಾಲ ರಾಜ್ಯಭಾರ ನಡೆಸಿದ ವಿಕ್ರಮಾದಿತ್ಯ VI. ಚೋಳರ ವೀರ ರಾಜೇಂದ್ರನ ಮಗಳನ್ನು ವರಿಸಿ, ಚೋಳರ ಜೊತೆ ಸ್ನೇಹದಿಂದಿದ್ದ. ಇವನು ಅನೇಕ ಯುದ್ಧಗಳನ್ನು ನಡೆಸಿದ್ದರೂ, ಶಾಂತಿ ಸಮೃದ್ಧಿಗಳಿಗೆ ಈತನ ಮೊದಲ ಪ್ರಾಶಸ್ತ್ಯವಾಗಿತ್ತು. ಪರಮಾರರು ಇವನಿಗೆ ಮಾಂಡಳೀಕರಾದರು, ಹೊಯ್ಸಳರ ವಿಷ್ಣುವರ್ಧನನು ಇವನಿಗೆ ಸೋತು ವಿಧೇಯನಾಗಿರಬೇಕಾಯಿತು. ಕಂಚಿಯಿಂದ ನರ್ಮದೆಯವರೆವಿಗೂ ಕರ್ನಾಟಕವು ಇವನ ಕಾಲದಲ್ಲಿ ವಿಸ್ತಾರಗೊಂಡಿತ್ತು. ಬಿಲ್ಹಣ ಕವಿ ಇವನನ್ನು ಕುರಿತಾಗಿ "ವಿಕ್ರಮಾಂಕ ದೇವಚರಿತಂ" ರಚಿಸಿದ. ಇವನ ಪ್ರಧಾನ ರಾಣಿ ಚಾಂದಲದೇವಿಯೂ ಸಂಗೀತ ನೃತ್ಯ ಕಲೆಗಳಲ್ಲಿ ಪರಿಣಿತಳಾಗಿ "ಅಭಿನವ ಸರಸ್ವತಿ" ಎನಿಸಿದ್ದಳು. ವಿಕ್ರಮಾದಿತ್ಯ ತನ್ನ ಪಟ್ಟಾಭಿಷೇಕವಾದ ೧೦೭೬ ರಿಂದ ಚಾಳುಕ್ಯ ವಿಕ್ರಮಶಕ ವೆಂಬ ಹೊಸ ಸಂವತ್ಸರವನ್ನೇ ಆರಂಭಿಸಿದ.

ನಂತರದ ದಿನಗಳಲ್ಲಿ ಮತ್ತೆ ಸಮರ್ಥರಾದ ರಾಜರನ್ನು ಕಾಣದ ಕಲ್ಯಾಣದ ಚಾಳುಕ್ಯ ವಂಶ, ಕುಗ್ಗುತ್ತಾ ಸಾಗಿ ೧೧೯೨ ರಲ್ಲಿ ಕಲಚೂರಿಗಳ ಪಾಲಾಯಿತು.

ಕಲಚೂರಿಗಳು: ಕೇವಲ ೨೦ ವರ್ಷಗಳಷ್ಟು ಕಾಲ ರಾಜ್ಯಭಾರ ನಡೆಸಿದ ಕಲಚೂರಿಗಳು, ಮಧ್ಯಭಾರತದಿಂದ ಬಂದವರು. ಕರ್ನಾಟಕದಲ್ಲಿನ ತಮ್ಮ ಆಡಳಿತಕ್ಕೆ ಮುಂಚಿನಿಂದಲೂ ಹೊರಗಿನಿಂದಲೇ, ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರ ಜೊತೆ ಸಂಬಂಧ ಬೆಳೆಸಿಕೊಂಡು ಬಂದಿದ್ದರು.

ಈ ವಂಶದಲ್ಲಿ ಗಣ್ಯನಾದ ಏಕೈಕ ಅರಸ ಬಿಜ್ಜಳ. ೧೧೫೭ ರಲ್ಲೇ ಸ್ವತಂತ್ರನಾದರೂ, ಬಿಜ್ಜಳನು ೧೧೬೨ ರಲ್ಲಿ ಸಾಮ್ರಾಟನಾಗಿ ತನ್ನ ಆಳ್ವಿಕೆ ಆರಂಭಿಸಿದ ಈತ ಪರಾಕ್ರಮಿಯಾದ ರಾಜನಾಗಿದ್ದು, ಹೊಯ್ಸಳರು, ಸೇವುಣರು, ಚೋಳ, ಕಳಿಂಗ, ಮುಂತಾದ ರಾಜರನ್ನೆಲ್ಲ ಸೋಲಿಸಿದ್ದ. ಆದರೆ ಕೇವಲ ಐದು ವರ್ಷಗಳಲ್ಲಿ ಪದತ್ಯಾಗ ಮಾಡಿದ.

ಚಾಳುಕ್ಯರ ಕಾಲದಲ್ಲಿ ವೈದಿಕ ಸಂಪ್ರದಾಯವು ಜನಪ್ರಿಯವಾಗಿತ್ತು. ಶೈವ, ವೈಷ್ಣವ ಧರ್ಮಗಳು ಪ್ರಬಲವಾಗಿತ್ತು. ಈ ಸಮಯದಲ್ಲಿಯೇ ವೀರಶೈವ ಪಂಥವು ಬಲವಾಗಿ ಬೇರೂರಲಾರಂಭಿಸಿತು. ವಿಶೇಷವಾಗಿ, ಧಾರ್ಮಿಕ ಕ್ರಾಂತಿಯ ಕಾಲ ಇದು. ಆದರೆ ಬಸವಣ್ಣನವರಿಗಿಂತ ಮುಂಚೆಯೇ ಜೇಡರ ದಾಸಿಮಯ್ಯ ಈ ಪಂಥದ ಭೋಧನೆ ಆರಂಭಿಸಿದ್ದರು. ಈ ಸಮಯದಲ್ಲಿ, ಶೈವ, ವೀರಶೈವ, ಜೈನ ಪಂಥಗಳ ನಡುವಿನ ಪೈಪೋಟಿ ಬಲವಾಗಿ, ಮತಾಂತರಗಳು ಹೆಚ್ಚಾದವು. ಅಷ್ಟೇ ಅಲ್ಲ ಸಾಹಿತ್ಯ, ಭಾಷೆ,ಸಾಂಸ್ಕೃತಿಕ ಚಟುವಟಿಕೆ, ಶಾಸ್ತ್ರ, ಶಿಕ್ಷಣ, ಕ್ರೀಡೆ, ಅನೇಕ ಕಲೆಗಳೂ, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಅಪಾರವಾಗಿ ಅಭಿವೃದ್ಧಿ ಹೊಂದಿದವು.

ವಾಸ್ತು, ಶಿಲ್ಪಕಲೆಯ ವಿಚಾರದಲ್ಲೂ ಕಲ್ಯಾಣದ ಚಾಳುಕ್ಯರ ಕೊಡುಗೆ ಅನುಪಮವಾದುದು. ಕೊಣ್ಣೂರು, ಸವಡಿಗಳಲ್ಲಿ ಆರಂಭವಾದ ಇವರ ಶೈಲಿಯ ರಚನೆಗಳು, ನಂತರ ವಿಕಸನ ಹೊಂದುತ್ತಾ ಬಂದಿತು. ಪಟ್ಟದಕಲ್ಲಿನ ಪಾಪನಾಥ ದೇವಾಲಯ ಇವರ ಕಾಲದಲ್ಲಿ ಸಂಪೂರ್ಣಗೊಂಡಿತು. ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ, ಇಟಗಿಯ ಮಹಾದೇವ, ಇವರ ಕಾಲದ ಶ್ರೇಷ್ಠ ಕೊಡುಗೆಗಳು.

ಇವರ ಕಾಲದಲ್ಲಿ ಜೈನ ಕವಿ ಹಾಗೂ ಸಂಸ್ಕೃತ ವಿದ್ವಾಂಸ ವಾದಿರಾಜ, "ಯಶೋಧರ ಚರಿತಂ" ಮತ್ತು "ಪಾರ್ಶ್ವನಾಥ ಚರಿತಂ" ರಚಿಸಿದ. ಬಿಲ್ಹಣನ "ವಿಕ್ರಮಾಂಕದೇವ ಚರಿತ", ವಿಜ್ಞಾನೇಶ್ವರನ, ಹಿಂದೂ ಕಾನೂನು ಗ್ರಂಥ "ಮಿತಾಕ್ಷರ", ಸೋಮೇಶ್ವರ III ರ "ಅಭಿಲಿಷಿತಾರ್ಥ ಚಿಂತಾಮಣಿ" ಎಂಬ ಖ್ಯಾತ ವಿಶ್ವಕೋಶ, ಕವಿಚಕ್ರವರ್ತಿ ರನ್ನನ "ಗಧಾಯುದ್ಧ" ಮತ್ತು ಅಜಿತ ಪುರಾಣ, ಹೀಗೆ ಅನೇಕ ಶ್ರೇಷ್ಠ ಕೃತಿಗಳ ರಚನೆಯಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಈ ಕಾಲದ ಪ್ರಮುಖ ಸಾಹಿತ್ಯದ ಬೆಳವಣಿಗೆಯೆಂದರೆ ಶರಣರ ವಚನ ಸಾಹಿತ್ಯದ ಉಗಮ ಮತ್ತು ಅದರ ವಿಕಸನ. ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿಯಂಥವರು ಸರಳ ಕನ್ನಡದಲ್ಲಿ, ವಚನಗಳನ್ನು ರಚಿಸುವುದರ ಮೂಲಕ ಹೊಸದೊಂದು ಸಾಹಿತ್ಯ, ಧಾರ್ಮಿಕ ಮತ್ತು ತಾತ್ವಿಕ ಕ್ರಾಂತಿಯನ್ನೇ ಉಂಟುಮಾಡಿದರು... ▪

ಜಾಣ ಕರ್ನಾಟಕ – ಉತ್ತರ

೧. ಕದಂಬ ವಂಶ, ಮಧುಕೇಶ್ವರ ದೇವಾಲಯ.

೨. ವೀರನಾರಾಯಣ, ಕುಮಾರವ್ಯಾಸ ಭಾರತ (ಗದುಗಿನ ಭಾರತ, ಕರ್ಣಾಟ ಭಾರತ ಕಥಾಮಂಜರಿ ಎಂದೂ ಕರೆಯಲ್ಪಡುತ್ತದೆ)

ವಿಜ್ಞಾನ

ಗುಳ್ಳೆಯೊಡನೆ ಆಟ – ದುಂಬಿ ಮನೆಯ ಪಾಠ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

ವಾಶಿಂಗ್ ಪೌಡರ್ – ೩ ಪ್ರಮಾಣ

ಬೆಚ್ಚಗಿನ ನೀರು – ೭ ಪ್ರಮಾಣ

ಗ್ಲಿಸರಾಲ್ – ೧ ಪ್ರಮಾಣ

ಯಾವುದೇ ಬಣ್ಣದ ಸ್ವಲ್ಪ ಅಕ್ರಿಲಿಕ್ ಪೇಯಿಂಟ್

೧ ಬಿಳೀ ಕಾಗದ, ೧ ಸ್ಟ್ರಾ, ೧ ತಟ್ಟೆ





ವಿಧಾನ:

ಮೊದಲ ನಾಲ್ಕು ಪದಾರ್ಥವನ್ನು ಒಂದು ತಟ್ಟೆಯಲ್ಲಿ ಚೆನ್ನಾಗಿ ಕಲೆಸಿ, ಸ್ಟ್ರಾ ಮುಖಾಂತರ ಗುಳ್ಳೆಗಳು ಬರುವ ಹಾಗೆ ಊದಿರಿ

ಗುಳ್ಳೆಗಳ ಮೇಲೆ ಬಿಳೀ ಕಾಗದವನ್ನು ಹಗುರವಾಗಿ ಒತ್ತಿ.

ಕಾಗದದ ಮೇಲೆಲ್ಲಾ, ವಿವಿಧಾಕಾರದ ಗುಳ್ಳೆಗಳ ಚಿತ್ರಣ ಮೂಡುತ್ತದೆ.

(ಬೇರೆ ಬೇರೆ ಬಣ್ಣಗಳನ್ನು ಬಳಸಿ ಮಾಡಿದರೆ, ನೋಡಲು ಇನ್ನೂ ಚೆನ್ನಾಗಿರುತ್ತದೆ)

ಏನಾಗುತ್ತಿದೆ:

ಗುಳ್ಳೆಗಳು ನಾವಂದುಕೊಂಡಂತೆ ಯಾವಾಗಲೂ ದುಂಡಾಗಿ ಇರಲೇಬೇಕೆಂದಿಲ್ಲ. ಅದನ್ನು ತೋರಿಸಿಕೊಡುವ ಉದ್ದೇಶವೇ ಈ ಪ್ರಯೋಗ. ಈ ಪ್ರಯೋಗದಲ್ಲಿ, ಸಾಕಷ್ಟು ಗುಳ್ಳೆಗಳು ಬರುವ ಹಾಗೆ ಊದಿದಾಗ, ಗುಳ್ಳೆಗಳು ಪರಸ್ಪರ ಒತ್ತಿಕೊಳ್ಳುತ್ತವೆ. ಪಕ್ಕದಲ್ಲಿನ ಗುಳ್ಳೆಗಳು ಒಂದೇ ಗಾತ್ರವಾದರೆ, ಗುಳ್ಳೆಯ ಹೊರಮೈ ಸಮತಟ್ಟಾಗಿರುತ್ತದೆ (ಫ್ಲಾಟ್). ವಿಭಿನ್ನ ಗಾತ್ರದ್ದಾಗಿದ್ದರೆ, ಸಣ್ಣ ಗುಳ್ಳೆಯು, ದೊಡ್ಡ ಗುಳ್ಳೆಯನ್ನು ಒತ್ತಿ ಉಬ್ಬಿಕೊಂಡಿರುತ್ತದೆ.

ಪೇಪರ್ ಮೇಲಿನ ಚಿತ್ರಣವನ್ನು ನೋಡಿದಾಗ ಹಲವಾರು ಮಾದರಿಯ ರಚನೆಗಳು ಕಾಣುತ್ತವೆ. ನೀವು ಹೆಚ್ಚು ಗುಳ್ಳೆಗಳನ್ನು ಊದಿದ್ದರೆ, ಸಾಮಾನ್ಯವಾಗಿ ಷಡ್ಭುಜದ (ಆರು ಬದಿ) ಒಂದು ಮಾದರಿ ಕಾಣುತ್ತದೆ. ಏಕೆಂದರೆ ಹೆಚ್ಚು ಗುಳ್ಳೆಗಳು ಒಂದು ಪರಿಮಿತಿಯಲ್ಲಿ ಇರಬೇಕಾದರೆ ಗುಳ್ಳೆಗಳ ನಡುವಿನ ಅಂತರ ಸಾಧ್ಯವಾದಷ್ಟು ಕಡಿಮೆ ಇರಬೇಕು. ಶಡ್ಭುಜದ (ಹೆಕ್ಸಗನ್) ಪ್ರತಿ ಮುಖವು ಇನ್ನೊಂದು ಶಡ್ಭುಜಕ್ಕೆ ಯಾವುದೇ ಅಂತರವಿಲ್ಲದ ಕುಳಿತುಕೊಳ್ಳಬಹುದಾದ್ದರಿಂದ, ಹೆಚ್ಚು ಒತ್ತಾಗಿ ಗುಳ್ಳೆಗಳು ಇದ್ದಾಗ, ಗೋಳಾಕಾರದ ಬದಲು, ಶಡ್ಭುಜದ ಮಾದರಿ ಕಾಣಿಸುತ್ತದೆ.

ಜೇನುನೊಣದ (ದುಂಬಿ) ಗೂಡನ್ನು ನೀವು ಗಮನಿಸಿರಬಹುದು. ಗೂಡಿನ ಪ್ರತಿಯೊಂದು ಮನೆಯೂ ಶಡ್ಭುಜದ ಆಕೃತಿಯಲ್ಲಿರುತ್ತದೆ. ಕಾರಣವಿಷ್ಟೇ. ಗರಿಷ್ಠ ಪ್ರಮಾಣದ ಜಾಗವನ್ನು ಕನಿಷ್ಠ ಪ್ರಮಾಣದ ಪದಾರ್ಥ ಉಪಯೋಗಿಸಿ ಸಾಧಿಸಲು ಶಡ್ಭುಜ ಮಾದರಿಯಲ್ಲಿ ಸಾಧ್ಯ. ದುಂಡಾಗಿದ್ದರೆ ಅಥವಾ ಅಷ್ಟಬುಜ ಇತ್ಯಾದಿ ಇದ್ದರೆ, ನಡುವೆ ಅಂತರ ಉಳಿಯುತ್ತದೆ. ತ್ರಿಕೋಣವೋ ಅಥವಾ ಚತುರ್ಭುಜವೋ ಆದರೆ ಗರಿಷ್ಠಮಟ್ಟದ ಒಳಜಾಗ ಸಿಗುವುದಿಲ್ಲ. ತನ್ನ ಅವಶ್ಯಕತೆಗೆ ಸೂಕ್ತವಾದ ಗೂಡು ಕಟ್ಟಿಕೊಳ್ಳುವ ದುಂಬಿ ಮತ್ತು ಪ್ರಕೃತಿಯು ಎಷ್ಟು ಜಾಣರಲ್ಲವೇ! ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪುರಂದರ ದಾಸರ ಆರಾಧನೆ

Sunday, 8th February 2015
Ermington Community Hall
9:00 am – 2:00 pm
8 River Road, Ermington NSW

Purandarasydney@yahoo.com.au

ಶ್ರೀ ಮಧ್ವ ನವಮಿ

Venue: SRI MANDIR
Address: No 286 Cumberland Road AUBURN
(Corner of Albert & Cumberland Roads)
Time: 9.30am to 2.00pm
Date: SATURDAY 07/02/2015
Contact: Sridhar & Nanda Kumsy - 9672-8485
Vadiraja & Shantha Tekkatte 9745-4883

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.